ಕೊರವಂಜಿ

ಸಂಪುಟ ೨೧ ಆಗಸ್ಟ್ ೧೯೫೯ ಸಂಚಿಕೆ ೬

ಕುಹಕಿಡಿಗಳು

ಸಿಕ್ಕಿಂ, ಭೂತಾನ್, ನೇಪಾಳದ ಹತ್ತಿರ ಹತ್ತಿರ ಕೂಡ, ಕಾಮಾಲೆರೋಗ ಹರಡುವ ಸಂಭವವಿದೆಯಂತೆ!

—ಕಾಮಾಲೆ ರೋಗವೇನೂ ಚೀನೀಯರ ಸ್ವತ್ತಲ್ಲವಲ್ಲ!! ಭಾರತಕ್ಕೂ ಬರಬಹುದಲ್ಲ!

* * * *

ಸಿಗರೇಟ್ ಬೆಲೆ ಏರಿದ ಪ್ರಯುಕ್ತ ಹಲವಾರು ಜನರು ಮೀಶೇನ ಪೂರ್ಣವಾಗಿ ಬೋಳಿಸಿಕೊಂಡರಂತೆ

—ಕಡೆ ತನಕ ಸೇದಬಹುದು ಎಂದಿರಬಹುದೇ? ಅಥವಾ ಮೀಶೆ ಹೊತ್ತ ಗಂಡಸಿಗೆ ಅಷ್ಟು ಸಂಪಾದನೆ ಸಾಧ್ಯವಿಲ್ಲ ಎಂತಲೋ?

* * * *

ನೆಹ್ರೂರವರು ಬರೆದ ಪತ್ರಗಳಿಗೆ ಚೀಣೀಯರು ಇನ್ನೂ ಜವಾಬು ಕೊಟ್ಟಿಲ್ಲವಂತೆ.

—ಮೌನೇನ ಕಬಳಂ ಜಾಸ್ತಿ! ಅಲ್ಲವೇ?

* * * *

ದಲಾಯಿ ಲಾಮಾರವರಿಗೆ ಭಾರತ ಬಿಟ್ಟು ಇನ್ನೆಲ್ಲಿಗೂ ಹೋಗುವ ಯೋಚನೆ ಇಲ್ಲವಂತೆ!

—ಮನೆಮಗಳು ತೀರಿಕೊಂಡಮೇಲೆ ಮಾವನ ಮನೇಲಿ ಅಳಿಯ ಬೇರು ಬಿಟ್ಟಂತಾಗುತ್ತದೆಯೇ?

ಅಣುಶಕ್ತಿಯಿಂದ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಇನ್ನು ಮೇಲೆ ತ್ವರಿತವಾಗಿ ಯಶಸ್ವಿಯಾಗಿ ನಡೆಸುತ್ತಾರಂತೆ.

—ಅಣುಶಕ್ತಿಯಿಂದ ವೈದ್ಯರುಗಳೂ ಯಶಸ್ವಿಯಾಗಿ ತ್ವರಿತವಾಗಿ ಕೆಲಸ ಮಾಡುವಂತೆ ಮಾಡಲು ಸಾಧ್ಯವೇ?

* * * *

ಐಸೆನ್‌ಹೋವರರು ಭಾರತಕ್ಕೆ ಬಂದಾಗ, ಬೆಂಗಳೂರಿಗೆ ಕರೆಸಿ ಲಾಲ್‌ಬಾಗಿನಲ್ಲಿ ಬುಲ್ಗನಿನ್‌ರವರು ನೆಟ್ಟ ಸಸಿಯನ್ನು ಕಿತ್ತು ಆ ಪಾತಿಯಲ್ಲಿ ಐಕರ ಕೈಲಿ ಸಸಿ ನೆಡಿಸುತ್ತಾರೆಂಬುದು ಶುದ್ಧ ತಿಳಿಗೇಡಿತನವಂತೆ!

* * * *

ದೇಶದಲ್ಲಿ ಆಹಾರದ ಅವ್ಯವಸ್ಥೆ ಅತಿಯಾಗಿ ತುತ್ತಿನ ಚೀಲದ ಹಾಹಾಕಾರ ಹೆಚ್ಚಾದಪ್ರಯುಕ್ತ, ಕೇಂದ್ರ ಆಹಾರ ಸಚಿವ ಜೈನರು ರಾಜಿನಾಮೆಯಿತ್ತರಂತೆ.

—ಕೆರೆ ಒಡೆದ ಮೇಲೆ ಕಾವಲುಗಾರನ ಕಂಬಳಿ ಕಿತ್ತುಕೊಂಡರಂತೆ!!

* * * *

ಗಾಲ್ಫ್ ಆಟದಲ್ಲಿ ತಮಿಳರು ಬಲು ಮುಂದುವರಿದಿದ್ದಾರಂತೆ.

—ಅಲ್ಲವೇ ಮತ್ತೆ! ಆ ಭಾಷೆ ಹಾಗೆ ಅವರನ್ನು ಆಡಿಸುತ್ತೆ!

* * * *

ಟಾಗೂರ್‌ರವರ ಶತಮಾನೋತ್ಸವದ ಪ್ರಯುಕ್ತ ಪ್ರತಿಯೊಂದು ದೊಡ್ಡ ಷಹರಿನಲ್ಲೂ ನಾಟಕಮಂದಿರವೊಂದನ್ನು ಕಟ್ಟಿಸುವರಂತೆ.

—ಅಂದ ಮೇಲೆ ಪ್ರಜಾಸಭೆಗಳನ್ನೂ ಅಲ್ಲೇ ರಂಗಿನ ಮೇಲೆ ನಡೆಸಬಹುದಲ್ಲವೇ? ಇನ್ನು ಮುಂದೆ!

* * * *

ಕೃಶ್ಚೇವ್‌ರವರು ಅಮೆರಿಕಾಕ್ಕೆ ಭೇಟಿಯೀಯುತ್ತಾರೆ ಎಂಬ ಸುದ್ಧಿಯನ್ನು ಕೇಳಿಯೇ ಹಲವಾರು ಅಮೆರಿಕನ್ನರು ಕೆಂಪಾಗಿದ್ದಾರಂತೆ.

—ಅಂದರೆ ಕೃಶ್ಚೇವ್‌ರವರಿಗೆ ಕೆಂಪು ಸ್ವಾಗತ ಭದ್ರವಾದಂತಾಯ್ತು!

* * * *

ಕೇರಳದಲ್ಲಿ ಮಾಡಿದ ಹಾಗೆ ಕೇಂದ್ರ ಸರ್ಕಾರವು ನಮ್ಮ ಮನೆಯಲ್ಲೂ ಹಸ್ತಕ್ಷೇಪ ಮಾಡಿ ಆಡಳಿತ ವಹಿಸಿಕೊಳ್ಳಬಾರದೇ? ನಮ್ಮ ಸಂಸಾರದಲ್ಲೂ ಅಂತರಕಲಹ ಮಿತಿಮೀರಿದೆ, ಎಂದು ಮಿಟಕಲಾಡಿ ಕಾಗದ ಬರೆದಿದ್ದಾಳೆ.

* * * *

ಸಕ್ಕರೆ ಬೆಲೆ ಗಗನಕ್ಕೆ ಏರಿರುವುದಕ್ಕೂ, ಅದರ ವ್ಯಾಪಾರವನ್ನು ೩–೪ ಜನದ ಕೈಲೇ ಮೀಸಲಾಗಿರುವುದಕ್ಕೂ, ಬೆಂಗಳೂರಿನಲ್ಲಿ ಅಖಿಲಭಾರತ ಕಾಂಗ್ರೆಸ್ ಅಧಿವೇಶನವು ನಡೆಯುವುದಕ್ಕೂ, ಏನೂ ಸಂಬಂಧವಿಲ್ಲವಂತೆ.

ಇದನ್ನು ಕೇಳಿದ್ದೀರಾ?

ಹಿರಿಯಧಿಕಾರಿಯನ್ನು ಕಚೇರಿಗೆ ಬಂದಾಗ ಎಲ್ಲರೆದುರಿಗೂ ಏನೊಂದೂ ಮಾತನಾಡದೆ ಚಪ್ಪಲಿ ತೆಗೆದುಕೊಂಡು ಹೊಡೆದ ಅಪರಾಧಕ್ಕೆ ಶಾಮುವನ್ನು ನ್ಯಾಯಾಸ್ಥಾನದಲ್ಲಿ ನಿಲ್ಲಿಸಿದ್ದರು.

ನ್ಯಾಯಾಧೀಶರು ಕೇಳಿದರು "ಏಕಪ್ಪಾ! ಹೀಗೆ ಮಾಡಿದ್ದುಂಟೇ" ಎಂದು.

ಶಾಮು ಹೇಳಿದ: "ಅಪರಾಧಿ ಸ್ವಾಮಿ ನಾನು, ಅಧಿಕಾರಿಗಳನ್ನು ಚಪ್ಪಲೀಲಿ ಹೊಡೆದುದು ಸತ್ಯ—ಶಿಕ್ಷೆ ಕೊಡಿ ಸ್ವಾಮಿ. ಹಾಗೂ ನನ್ನ ವಿವಾಹ ವಿಚ್ಛೇದನ ವನ್ನೂ ಮಾಡಿಸ್ವಾಮಿ. ಅರ್ಜಿ ಸ್ಟಾಂಪು ಸಹಿತ ಸಿದ್ಧಮಾಡಿದ್ದೇನೆ" ಎಂದು.

'ಹ್ಞಾ' ಎಂದರು ನ್ಯಾಯಾಧೀಶರು. ಏನಂದೆ? ಯಾಕೆ? ಎಂದರು.

"ಏನೂ ಇಲ್ಲ ಸ್ವಾಮಿ, ಅವರ ಮೇಜಿನ ಡ್ರಾಯರೊಳಗೆ ಗುಪ್ತ ಕಾಗದ ಗಳನ್ನು ಇಡಲು ಹೋದಾಗ ನನ್ನ ಹೆಂಡತಿಯ ಕಾಗದಗಳು ಸಿಕ್ಕಿದುವು ಅಷ್ಟೇ! ಎಂದನಂತೆ.

* * * *

ರಾಜೀವಪುರದಲ್ಲಿ ರಾಜಕಾರಣಿಗಳ ವಾರ್ಷಿಕ ಸಭೆ ಏರ್ಪಾಡಾಗಿತ್ತಂತೆ. ಆ ಕಾರಣ ಹಲವಾರು ರಸೀದಿ ಪುಸ್ತಕಗಳು ಸಿದ್ಧವಾಗಿತ್ತಂತೆ.

ಅಚ್ಚಣ್ಣದಾಸರು ಷಹರಿನಲ್ಲಿ ಹರಿಕಥೆ ಮಾಡಿದರಂತೆ—ವಿಷಯ ರಾಜಕೀಯ ದಿಂದಲೇ ಅನ್ನ—ಅನ್ನದಿಂದಲೇ ತೃಪ್ತಿ. ನಂತರವೇ ಮೋಕ್ಷ—ನೀತಿ—ವಾರ್ಷಿಕ ಸಭೆಗೆ ಚಂದಾ ನೀಡಿ.

ಶತಾಂಶ ಐದು ನನಗೆ ಅದರಲ್ಲಿ. ಮೂರನೇ ಹೆಂಡತಿಯ ಆರು ಮಕ್ಕಳ ಬಾಳ ನಡೆಸುತ್ತೇನೆ—

ಅಮೋಘವಾದ ಹರಿಕಥೆ—ತಲೆದೂಗಿ ನಕ್ಕು ಚಪ್ಪಳೆ ತಟ್ಟಿ ಬಲು ಖುಷಿಯಾ ಗಿದ್ದರು ಬಂದಿದ್ದವರೆಲ್ಲರೂ

ಮಂಗಳಾರತಿ ಹಾಡುವ ಮೊದಲು ತಟ್ಟೆಯನ್ನು ಸಭೆಯಲ್ಲಿ ಕಳಿಸಲಾಯಿತು —ತಟ್ಟೆ ಖಾಲಿಯಾಗಿ ಬಂದಿತು.

ಅಚ್ಚಣ್ಣ ಭಕ್ತರು ತಟ್ಟೆ ನೋಡಿದರು. ಕಿಕ್ಕಿರಿದು ತುಂಬಿದ್ದ ಮಂದಿರವನ್ನು ನೋಡಿದರು. ದಯಾಮಯಾ! ಭಗವಂತ! ರಸೀದಿ ಪುಸ್ತಕಗಳನ್ನೂ, ತುಂಬಿರದಿದ್ದರೂ ಪರವಾಗಿಲ್ಲ—ಹಿಂತಿರುಗಿ ಕಳಿಸಿದರೆ—ಈಗ ತಟ್ಟೆಯನ್ನು ಹಿಂತಿರುಗಿಸಿದಂತೆ-ಆಗ ಭಗವಂತನ ದಯಾಕರುಣೆ ನಮ್ಮೆಲ್ಲರಮೇಲೂ ಬಿದ್ದಂತೆಯೇ—ನೀನಾಮ ರೂಪಮುನಕೂ, ಎಂದು ಮಂಗಳಾರತಿ ಹಾಡು ನುಡಿದರಂತೆ.

*　　*　　*　　*

ಬಳೇಪೇಟೆ ಪಕ್ಕದ ಸಂದಿಯಲ್ಲಿದ್ದ ಮನೆಯೊಂದರಿಂದ ಜನನಾಯಕರೊಬ್ಬರು ಹೊರಬರುವುದನ್ನು ಕಂಡು ಅವರ ಬೆನ್ನು ಬಿದ್ದನಂತೆ ಹೆಬ್ಬಿಗುಬ್ಬಾಲೆಯ ಯುವಕನೊಬ್ಬ. ಅವರ ಹಿಂದೇನೇ ಶಿಲ್ಲು ಹೊಡೆಯುತ್ತಾ ನಡೆದನಂತೆ. ನಾಯಕರು ತಮ ನಿವಾಸ ಸೇರುವ ತನಕ ಶಿಲ್ಲು ಹಾಡು ಹಾಡುತ್ತಲೇ ಇದ್ದನಂತೆ. ಇವನ ನಕ್ಷತ್ರಿಕತನವನ್ನು ತಾಳಲಾರದೆ, ಹಾಗೂ ಅವನ ಬಾಯಿ ಮುಚ್ಚಿಸುವ ಸದುದ್ದೇಶದಿಂದ ನಾಯಕರು ಕೇಳಿದರಂತೆ "ಏನಪ್ಪಾ! ಮಗೂ! ಶಿಲ್ಲು ಹೊಡೆಯುತ್ತಾ ನೀನು ಹಾಡುತ್ತಿರುವುದು * ಯಾವ ಹಾಡು ಎಂದು ಕೇಳಿದರಂತೆ.

ಆಗ ಯುವಕ ಅಂದನಂತೆ ಪುರಂಧರ ದಾಸರ ಹಾಡು ಸಾರ್ "ನಂಬಿ ಕೆಟ್ಟವರಿಲ್ಲವೋ ನಿಮ್ಮನ್ನ" ಅಂಬೋ ಹಾಡು.

"ಬಲು ಜಾಣ ಇದ್ದೀ ನೀನು, ಬಾಯಿ ಮುಚ್ಚಿಕೊಂಡಿದ್ದರೆ ನಿನ್ನ ಇಷ್ಟಾರ್ಥ ಕೈಗೂಡಬಹುದು. ಏನು ಬೇಕು" ಎಂದರಂತೆ ನಾಯಕರು

"ನಿಮ್ಮ ಮನೆ ಜವಾನನಾಗಬೇಕು" ಅಂದನಂತೆ ಯುವಕ.

"ಅದರಿಂದೇನು ಸೊಗಸೋ! ನೋಡುಕ್ಕೆ ಚೆನ್ನಾಗಿದ್ದೀ, ಏನು ಓದಿದ್ದೀ? ಅಂದರಂತೆ. .

"ರಾಕಿಫೆಲ್ಲರ್ ಮಗನ ವಿಷಯ ಓದಲಿಲ್ಲವೇ ಸಾರ್! ನಿಮ್ಮನೆ ಸೇರಿಕೊಂಡರೆ, ಹೇಗೂ ಪದವೀಧರ ನಾನು, ನಿಮ್ಮಂಥವರ ಅಳಿಯ ಆಗೋ ಆಶೆ ಇದೆ" ಎಂದನಂತೆ

ಅಪರಾಜಿತ

(ಗೆಳೆಯ Y. N. K. ಗೆ ಅರ್ಪಿತ)

ಮೊನ್ನೆ ರಾಕೆಟ್ಟು ದಾರಿಯ ಬಿಟ್ಟು ಮರವೇರಿ ತಾಕೆಟ್ಟು
ಪುಡಿಯಾಯ್ತು; ಇಂದು ಬೆಳಗಿನ ಜಾವ, ಅದರೊಡೆಯ ಡ್ರೈವರ್ರು
ಬಕ್ಕೇಶಿ ನಡ ನಡುಗಿ, ಕಾಡುಗುಡ್ಡದ ನಡುವೆ ಬಿಲದಬಾಯಲಿ
ಕೊರೆಯ ಬೀಡಿಯನು ತುರುಕಿ ಬೆಂಕಿಯನಿಟ್ಟು, ಹಳೆಯೊಂದು
ರೇಡಿಯೇಟರ್ ರಿಪೇರಿಯ ಅಂಗಡಿಯ ಮುಂದೆ ಬೆಂಚಿನಲಿ
ಕುಳಿತು ಹೊಗೆಯನು ಬಿಟ್ಟು ತುಸುಕೆಮ್ಮಿ
ಕ್ಯಾಕರಿಸಿ ನೆಲಕುಗಿದು ತಲೆಕೆರೆದು ಮೈಮುರಿದು ಉದ್ಗರಿಸಿದನ್
ಇಂತು: ಅರೆ ಇಸ್ಕಿ ಥತ್ !
ಆಯಿತಿನ್ನಿದೆ ಅಂತ್ಯಮೆನ್ನಿಸಿತು ಬಕ್ಕಂಗೆ
ರಾಕೆಟ್ಟನಂತಿಮಾಘಾತದಲಿ ಸಿಕ್ಕಂಗೆ
ಮೇರಿಯನು ಬೆಂಬತ್ತಿದಾ ಕುರಿಯ ಮರಿಯಂತೆ
ಧರ್ಮಜನ ನೆರಳನೆಡೆಬಿಡದ ನಾಯ್ಮರಿಯಂತೆ
ವಿಧಿ ಬೆನ್ನಬಿಡದು ಈ ಬಡಪಾಯಿ ಬಕ್ಕನನ್.
ಬಕ್ಕೇಶಿ ಬಲು ಹಿಂದೆ ಮೃತ್ಯುಂಜಯುವ ನಡೆಸುತಿದ್ದಾಗ
ಶ್ರಾವಣದಿ ಭಾರಿ ಹಳ್ಳವೆ ಬಂದು, ಮೃತ್ಯುಂಜಯನ ಕೆಡಹಿ
ಕೊಚ್ಚಿಕೊಂಡೇ ಹೋಯ್ತು; ಆ ಬಳಿಕ ಮಹರುದ್ರ
ಮೋಟಾರ ನಡೆಸುತಿರೆ, ಆ ಬಸ್ಸ ಚಾರ್ ಕೋಲ ಪ್ಲ್ಯಾಂಟು
ಪ್ಲ್ಯಾಂಟೇ ಸಿಡಿದು ಅದು ಕೊಡ ನುಗ್ಗಾಯ್ತು,
ಕ್ಯಾಡಿಲಾಕಿನ ಸಾರಥಿತ್ವವನು ಬಕ್ಕೇಶಿ ಕೈಗೊಂಡು ಬಾಳುತಿರೆ
ಅದು ಏಕೊ ಆ ಕಾರು ಕಾಂಪೌಂಡುಗಳ ನೇರೆ ಹಾತೊರೆದು
ಕಾಲವನು ಕಾದು ಕೃತಕೃತ್ಯತೆಯ ಪಡೆಯಿತ್ತು.
ಹೆಚ್ಚೇನು? ಅವ ನಡೆಸಿದೆಲ್ಲ ಶಕಟಂಗಳುಂ ಮಡಿಯಿತ್ತು.
" ಓ ಬಂತು ವರ್ಷಋತು ಪಡುಗಡಲಿ ನೆಡೆಯಿಂದ
ಮೇಲೇರಿ ಬಂದು ಜನಪದವ ಕಳ್ತಲಿನಲ್ಲಿ ಕೆಡಹಿ
ಮಾರ್ಗದಲೆಲ್ಲ ನೀರ ಹರಿಸುತ್ತಲಿದೆ ಕರಿಮೋಡ, ಮೈಲಿ ಮೈಲಿಗು
ಲಾರಿ ಯೆಂಜಿನ್ನು ಕೆಟ್ಟು ನಿಂತಿವೆ ದಾರಿ ಪಕ್ಕದಲಿ
ಮುರುಕು ಗುಡಿಸಿಲ ಅಗ್ನಿ ಪಾನವನು ಮಾಡಿ ಸರದಾರ್ಜಿಗಳು

ತಮ್ಮ ಪ್ರಿಯ ತಮೆಯರನು ನೆನೆದು ಹಾಡುತಲಿಹರು
ಹಗಲಿಲ್ಲ ರವಿ ರಾತ್ರಿಯಿಲ್ಲ ತಾರಗೆಯ ಛವಿ, ಅಪಘಾತಗಳು
ಗಂಟೆಗೆಂಟು ಕಗ್ಗತ್ತಲಿನ ಗವಿ ನಮ್ಮ ಬುವಿ, ಅಯ್ಯೋ ನಾನೀಗ
ಕುಳಿತಿಲ್ಲಿ ಬೇಡಿಗೂ ಗತಿಯಿರದೆ ಪೋಲೀಸರಡಿವಿಡಿದು
ಸೇವಿಸಲು ಬೇಕಾಯ್ತೆ ?

ಹಿಂದೆಂತು ಇಂದಿಂತು ಮುಂದೆಂತು ಅಕಟಕಟ !
ಅಯ್ಯೋ ದರಿದ್ರದಾ ಸ್ಟೀರಿಂಗಿಗೇಕಂತು ಕಂಟ್ರೋಲು ತಪ್ಪಿತೋ ? ”
ಇಂತು ಚಿಂತೆಯಲಿದ್ದ ಬಕ್ಕನೊಂದೆರಡು ಚಣ ಬಿಕ್ಕಿ ಅತ್ತನು
ಮನದಿ, ಬಳಿಕವನ ಕರಿದುಟಿಯ ಮೇಲೇರಿ ಬಂತೊಂದು
ಮಂದ ಹಾಸದ ಮಾಲೆ, ‘ ಎಂಥ ಹೇಡಿಯೋ ನಾನು,
ದೇವರೇನೆನ್ನುವನೋ ? ಅವನ ಲೋಕದ ಲಾರಿಯೆಂಜಿನ್ನ
ಕಂಟ್ರೋಲು ತಪ್ಪಿ, ಆ ಹಿರಿಲಾರಿ ಮಿತಿಮೀರಿ ಬಲುಜಾರಿ
ಸತ್ಯದಿಂದನೃತಕ್ಕೆ, ಬೆಳಕಿನಿಂಕತ್ತಲೆಗೆ, ಅಮೃತತ್ವದಿಂದ
ಮೃತ್ಯುವಿನೆಡೆಗೆ ಧಾವಿಸಿರೆ, ಬೆಚ್ಚಿದನೆ ಬೆದರಿದನೆ
ನನ್ನಂತೆ ಮುದರಿದನೆ ? ಅಹ್ಹಹಹ ” ಎಂಬ ಭಾವವ
ಬೀರಿ ಮಿನುಗಿತ್ತು.

ಹೃದಯಾಂತರಾಳದಲಿ ಮನೆ ಮಾಡಿದೊಂದಾಶೆ ಮುರುಟಿತೇ
ಎಂದವನು ದುಗಡದಲಿ ಮುಳುಗಿಹನು.
ನಾಲ್ಕು ವರ್ಷದ ಹಿಂದೆ ಬೆಂಗಳೂರಿನ ಗಲ್ಲಿಯೊಂದರಲಿ
ಲಾರಿಯೇಜಂಟಿನಾಫೀಸಿನಲಿ ಕಂಡಿದ್ದನವನೊಬ್ಬ
ಟೈಪಿಸ್ಟ ಹುಡುಗಿಯನು ಅವನ ಮನ-ತುಡುಗಿಯನು
ಅವಳನಿವ ಕಂಡೊಡನೆ ‘ ಕಾಲದೇಶದ ಅರಿವು ಎತ್ತಲೋಮಾಯ
ರೇಡಿಯೋ ಪಲುಕಿ ಮಾಡಿತು ಒಂದು ಹಿರಿಗಾಯ
ಬಾನು ತಿಳಿನೀಲಿ ಸಾಲ್ಮರ ಬಿಸಿಲ ಧಗೆಯುಂಡು ತಣ್ಣನೆಯ
ನೆಳಲ ನೆಲಕೆರಚಿರಲು ತಾನೊಂದು ಕಾರೇರಿ ಅವಳೊಡನೆ
ದೂರ ದೂರಕೆ ಸಾರಿ, ಆಚೆಯ ದಿಗಂತವನು ಕಾಂಬ ಬಯಕೆಯ
ನನನು ಹೊತ್ತು, ಪ್ರೇಮಕೆ ಮನವನಿತ್ತು ಬಂದಿದ್ದನವ

ಪ್ರೇಮಬಾಣದ ನೋವು ಹೇಳಸಲ್ಲ ಅದನು ತಾಳಸಲ್ಲ
ಪ್ರಿಯತಮೆಯೆ ನುಳಿದಿನ್ನು ಬಾಳಸಲ್ಲ ಮೇಲ ಕೇಳಸಲ್ಲ.
ನೋವಲ್ಲಿ ಉಳಿದಿತ್ತು ಆ ಕನಸು ನನಸಾಗುವಾಸೆ ಇಂದಳಿದಿತ್ತು.
“ ಇನ್ನೆಂತು ಫಲಿಸುವುದು ? ಫಲಿಸದಿರೆ ಬಾಳೇಕೆ ?

ಇಂದು, ಕತ್ತಿಗೆ ಉರುಳು ಬಂದು, ತನ್ನರ್ಥವನು ನುಂಗಿ
ಬಾಳನು ಬೆಳಸಲೆಂದು ಬಂದಾಲಾರಿ, (ವಿಧಿ ಹತಕ ರಾಕೆಟ್ಟು !)
ಮಣ್ಣಿನಲಿ ಮಣ್ಣಾಗಿ, ಮುರಿದ ಮನ ಸುಣ್ಣಾಗಿ, ಬೇಕೂಫ
ಸ್ನೇಹಿತರು ಕೈತಿರುವಿ, ಇನ್ಸುರೆನ್ಸ್ ಸಂಶಯದಿ ಮುಳುಗಿತ್ತು
ಮುಂದೇನು ? ಮುಂದೇನು ?

ಮತ್ತೆ ಪರಸೇವೆಯೇ ? ಕಂಡಕ್ಟರಾಗುವುದೆ ?
ಗ್ಯಾರೇಜ ಸೇರುವುದೆ ? ಅಲ್ಲೇನು ಅವಘಡವೋ ?
ಇನ್ನಾದರೂ ನನ್ನ ಬೆನ್ನ ವಿಧಿ ಹರಸುವುದೇ ?"
ಮನದ ಸಂಶಯ ಸೈನ್ಯ ಮೇಲೇರಿ ಬರೆ ಬಕ್ಕ
ನೆದೆಗೆಡದೆ ಕುಳಿತಿದ್ದ, ಆದ ತಡೆದು ಹೋರಿದ್ದ
" ಎಂದಾದರೊಂದು ದಿನ ಸಾಲಸೂಲವ ತೊಳೆದು,
ಗಡ್ಡ ಬೋಳಿಸಿ, (ಮುಖದ ತೇಜ ತಾ ಹೊಳೆ ಹೊಳೆದು !)
ಖಾಕಿ ಪ್ಯಾಂಟನು ತೊಟ್ಟು, ಪಟ್ಟೆಯಂಗಿಯನುಟ್ಟು
ಕರಿ ಕನ್ನಡಕ ಧರಿಸಿ ಹಸಿರು ನೋಟನು ಮೆರೆಸಿ
ಬೆಂಗಳೂರಿಗೆ ಹೋಗಿ ಮೋಟಾರ ಸೈಕಲ್ಲ ಬಾಡಿಗೆಗೆ
ಪಡೆದು ಹ್ಯಾಂಡಲ ಹಿಡಿದು ಝುಮ್ಮೆಂದು ಸೌತ್‌ಪೆರೇಡಲಿಸುಳಿವೆ
(ಅವಳು ಹಿಂಗಡೆ ಕುಳಿತು ನನ್ನ ಪಿಡಿದರೆ–ಬಳ್ಳಿ
ಮರವ ನೆಮ್ಮಿರುವಂತೆ) ದುಃಖ ಮಾಲೆಯನಳಿವೆ
ಹರಿದಿರಲು ಮೋಟಾರ ಸೈಕಲಾ ರೋಡಿನಲಿ
ನರರೆಲ್ಲ ನಿರ್ನಿರಂ ನೋಡುತಿರೆ ಬೆರಗಾಗಿ, ಟಾಪ್‌ಸ್ಪೀಡ ಮುಟ್ಟುವೆಂ,
ಬರಲಾಗ ವಿಧಿ ಇದಿರು (ಹಿಂದೆ ಬರುವತಿತಿಲ್ಲ
ಅವಳಿರುವಳಲ್ಲ ಬೆಂಬಲವಾಗಿ) ಒಂದು ಕೈ
ನೋಡಿಯೇ ಬಿಡುವೆನಾ ವಿಧಿಗೆ ಡಿಕ್ಕಿಯ ಹೊಡೆದು

ಬೀಳುವುದೊ ವಿಧಿ ? ನಾನೆ ಬೀಳುವೆನೊ ತಲೆಯೊಡೆದು !"
ನೀರು ತುಂಬಿದ ಮೋಡ ತುಂತುರನು ಕರೆದಿತ್ತು
ದೂರದಲಿ ಸಾಲ್ಮರದ ಹಿಂದೆ ರಸ್ತೆಯ ತುದಿಗೆ
ಮೋಡಗಳು ಮೇಲೇರೆ ಹೊನ್ನಬಣ್ಣದ ಸೂರ್ಯ
ನೇರಿದನು ಪೂರ್ವ ಪರ್ವತವ ಬಕ್ಕನಬೀಡಿ
ಯಾರಿದುದು ಬಕ್ಕೇಶಿ ಕಡ್ಡಿಯನು ಕೆರೆದು ಬೆಂಕಿಯನದಕೆ
ತೋರಿದನು, **ಉಸಿರೆಳೆದು ಉಷ್ಷೆಂದು ಹೊಗೆಬಿಟ್ಟ.**

ಕವಿಕುಲ ಲಾಮ

ಗಲ್ಡಿ ದಿಮ್ರಂಗಣ್ಣ
ಮೊದಲ ಸಂಜೆ

ಗರಡಿ ದಿಮ್ಮ ರಂಗಣ್ಣನಿಗೆ ಕೋಪ ಬಂದುಬಿಡ್ತು.

ಹತ್ತು ವರ್ಷದ ಮಗ ಆ ಸಂಜೆ ಮನೆಗೆ ಬಂದಾಗ, ಬಲಗಣ್ಣು ನೀಲಿಗಟ್ಟಿತ್ತು. ಎಡತೋಳು ಜೋಲು ಬಿದ್ದಿತ್ತು. ಬಲಗಾಲು ಕುಂಟುತಿದ್ದ. ಮೂಗಿನಲ್ಲಿ ರಕ್ತ ಸುರಿದು ತುಟಿಮೇಲೆ ಹೆಪ್ಪುಗಟ್ಟಿದ ಗುರ್ತಿತ್ತು.

ಗರಡಿ ದಿಮ್ಮರಂಗಣ್ಣನಿಗೆ ತುಂಬಾ ದುಃಖವಾಯಿತು.

"ಯಾಕ್ಲಾ! ಮಗ! ಇಷ್ಟು ಪೆಟ್ಟಾಗ್ಯೆತಿ! ತುಂಬಾ ನೋವಾಗ್ತದ! ಜಟಕಾಕ್ಕೆ ಸಿಕ್ಕಿಬಿದ್ಯಾ? ಆಟೋರಿಕ್ಷಾಕ್ಕೆ ಟಾಂಗ್ ಕೊಟ್ಟೆಯಾ? ರಸ್ತೇಲಿ ಜಾರಿ ದೊಡ್ಡ ಚರಂಡಿಗೆ ಬಿದ್ದೆಯಾ?" ಎಂದು ಮಗನ ತಲೆ ತಡವರಿಸುತ್ತಾ ಸೊರಗಿದ ದನಿಯಲ್ಲಿ ಕೇಳಿದ.

ಮಗನಿಗೆ ದುಃಖ ತುಂಬಿ ಬಂತು. ಅಪ್ಪನಿಗೆ ಇಷ್ಟು ದುಃಖ ಆಯ್ತಲ್ಲ ಅಂತ. ಅಪ್ಪನ ದಿರಿಜಾಮಿಾಶೇ ತುದೀನ ನವಿರಾಗಿ, ಎಳೆಬೆರಳಲ್ಲಿ ಹುರಿಗೊಳಿಸುತ್ತಾ ಮೆಲು ದನಿಯಲ್ಲಿ ಹೇಳಿದ.

"ಇಲ್ಲಾ! ಅಪ್ಪಾ! ಜಟ್ಕಾಕ್ಕೆ ಸಿಗಲಿಲ್ಲಪ್ಪ, ಆಟೋರಿಕ್ಷಾಗೆ ಟಾಂಗ್ ಕೊಡ ಲಿಲ್ಲಪ್ಪ, ರಸ್ತೇಲಿ ಜಾರಿ ಚರಂಡೀಲಿ ಬೀಳಲಿಲ್ಲಪ್ಪ. ಸಂಜೆ ಕಾಪುನ ಗಲ್ಡಿತಾವ ಹಾಡ್ತಾಹೋಗ್ತಿದ್ದೆ. ಒಳಗಿಂದ ಪೈಲ್ವಾನ್ ಕನಕಾಜೆಟ್ಟಿ ಹೈದ ಹೊರಗೆ ಬಂದ, "ಯಾವ್ನೋ ಕೇಕ್ಡಿಕೆ. ನಮ್ಮ ಗಲ್ಡಿತಾವ ಹಾಡ್ತಾ ನಡೀತಾನೆ" ಅಂತ ನನ್ನ ಸೀದಾ ತೋಳು ಹಿಡಿದ. ಎಡಗೈ ಮುಷ್ಟಿ ಹಿಡಿದು ಒಂದ ಮಡಗಿದೆ ಅವನ ಗಲ್ಲಕ್ಕೆ! ಆವ ನನ್ನ ತೋಳು ತಿರುಚಿದ. ದೋಬಿ ಪಟಕ್ ಹಾಕಿದೆ. ಬಿದ್ದ ಅವ.

ಗರಡಿ ದಿಮ್ಮ ರಂಗಣ್ಣನಿಗೆ ಕೋಪ ಬಂದುಬಿಡ್ತು. ದುಃಖ ಇಂಗಿಹೋಯಿತು ಮಗನನ್ನ ನೂಕಿದ, ಧ್ರುವನನ್ನು ಹಿಂದೊಮ್ಮೆ ಅಪ್ಪ ನೂಕಿದಂತೆ—

"ಏನ್ ಮಗಾ! ಆ ಕಳಪೆ ಜಟ್ಟಿ ಮಗನ ಕೈಲಿ ಪೆಟ್ಟು ತಿಂದು ಬಂದೆಯಾ?

"ನನ್ನ ಮಗನಾ ನೀನು? ಜೇಡರ ಉಳ ಇದ್ದಾಂಗಿದಾನೆ ಆ ಕಡ್ಡೀ ಪೈಲ್ವಾನ. ಮೂವತ್ತಕ್ಕೆ ಅವನ ಮಗ ಹುಟ್ಟಿದ್ದು. ಆ ಹೈದಂಗೆ ಹದಿನೆಂಟು ವಯ ಸ್ಸಾಗಿರ್ಬೋದು! ಹಂಗೂ ಅವನ ಕೈಲಿ, ಸೋತೆಯಾ?

ಎಂದು ರೇಗಿದ ಗಲ್ಡಿ ದಿಮ್ರಂಗಣ್ಣ.

"ಅಪ್ಪಾ! ಸತ್ತೋರ ಮಾತ್ನಾಡೋವಾಗ ಬೈಬಾರದು ಅಂತ ನೀನೇ ಹೇಳಲಿಲ್ವಾ" ಅಂದ ಮಗ.

"ಹಂಗಾ ಹಂಗಾ!" ಎಂದು ಗಲ್ಡಿ ದಿಮ್ರಂಗಣ್ಣ ಮಗನನ್ನ ಸೆಳೆದು ಬಾಚಿ ತಬ್ಬಿಕೊಂಡ.

—ಬಚ್ಚ.

ಹಲಸಿನ ಹಣ್ಣು

ಗೌಸುದ್ದೀನ್ ಬರೆದ ಪಾಠ

ಹಲಸಿನ ಹಣ್ಣು ಒಂದು ಭಾರಿ ಇಸಮು. ಹಸಿ ಮೌಲ್ವಿಗಳ ಹದಿನೈದು ದಿನದ ಗಡ್ಡದ ಹಂಗೆ ಮುಂಗೈ ಆಡಿಸಿದರೆ ತರಿಯುತ್ತೆ. ಕೈ ಕೂಡ ಕೆಂಪಾಗ್ತಾನೆ. ಖೂನ್ ಕೂಡ ಬಂದು ಬಿಡ್ತಾನೆ. ದೇಖಲಿಕ್ಕೆ ಮುಟ್ಟಲಿಕ್ಕೆ ಹೀಗಿದ್ದಾರೂ ಕೂಡ, ಕತ್ತರಿಸಿ ಬಿಡಿಸಿದರೆ ಬಲು ಮೋಜು. ಆದರೆ ಕತ್ತರಿಸಬೇಕಾದ್ರೆ, ಕೋಳಿಚೂರಿ ಆಗುಲ್ಲ, ಬಕ್ರಾ ಕತ್ತೀನೇ ಬೇಕು, ಹಂಗೂ ಇವನ್ನ ಬಿಡಿಸಬೇಕಾದರೆ ಬಲು ಹುಷಾರ್ ಬೇಕು. ಇಲ್ಲದಾಗೆ ಕೈಗೆ ಹಣ್ಣು ಅಂಟುಬಿಡ್ತಾನೆ. ಬೆರಳು ಬಿಡಿಸೋ ದಕ್ಕೆ, ಕೈಝಾಡಿಸಿದರೆ ಬೆರಳೇ ಬಿದ್ದು ಹೋಗ್ತಾನೆ ಹಣ್ಣಿನ ಜತೇಗೆ. ದೋಸ್ತು ಯಾರಾದರೂ ಬಂದು ಜಗ್ಗಿ ಬಿಡಿಸಿದರೆ, ಅವನ ಬೆರಳಿಗೆ ಅಂಟುಕೊಂಡುಬಿಡ್ತಾನೆ. ಶುದ್ಧ ಸೈತಾನನ ಹಾಗೆ, ಬಿಡಿಸೋಕ್ಕೆ ಬಂದ ಮೌಲ್ವೀನೇ ಅದಂಕೊಂಡುಬಿಡ್ತಾನೆ. ನಮಾಜ್ ಮಾಡಲಿಕ್ಕೆ ಜಲ್ದಿ ಜಲ್ದಿ ಹೋಗಿ ಮಸೀದೀನೇ ತಲೆಮೇಲೆ ಬೀಳಿಸಿ ಕೊಂಡ ಹಂಗೇ ಈ ಹಣ್ಣು ಬಿಡಿಸುಕ್ಕೆ ಹೋಗಿ ಬೆರಳೇ ಬಿದ್ದುಹೋಗ್ಬಿಡಬಹುದು.

ಅದಕ್ಕೇ ಬೆರಳಿಗೆಲ್ಲಾ ಎಣ್ಣೆ ಮಾಲೀಶು ಮಾಡಿಕೊಂಡು, ತೊಳಿ ತೊಳಿ ಬಿಡಿಸಬೇಕು. ಬಿಡಿಸಿದ ಮೇಲೆ ಬೇರೆ ತಾಟನಾಗೆ ಮಡಗಬೇಕು.

ನೀರ್ಮನೆಗೆ ಹೋಗ್ಬೇಕು. ಲಾಲ್‌ಮಟ್ಟಿ ಕೈಗೆ ಹಚ್ಚಿಕೊಂಡು ಕೈಗಳನ್ನು ಪಸಂದಾಗಿ ಪಾಕ್‌ಮಾಡ್ಬೇಕು. ನಂತರ ಅತ್ತರ್ ಹಚ್ಚಬೇಕು.

ಬಿರಿಯಾನಿ ಕೂರ್ಮಾ ಉಣ್ಣಬೇಕು. ಝುಲ್ಪಾ ಕೂಡಬೇಕು. ಆಗ ಹೂರೇ ತರಬೇಕು ಹಲಸಿನ ತತ್ತೀನ, ಬೆಳ್ಳಿ ತಟ್ಟೇಲಿ. ಅದರ ಮ್ಯಾಗೆ ಹಚ್ಚಿರಬೇಕು, ಷಹತ್.

ಬಾಯಿಗಿಡಬೇಕು ಆಗ ಒಂದು ತುಕಡಾನ. ಜೇಬ್ ಆಡಿಸಬೇಕು ತುಕಡಾ ಸುತ್ತ. ಹಲ್ಲಿನಲ್ಲಿ ಮಿರ್ಪಾ ಕಚ್ಚಬೇಕು. ಆಗ ಖುಷಿ ಬರುತ್ತೆ. ವಜನ್ ಕಮ್ಮಿಯಾಗುತ್ತೆ. ದಿಲ್ ಪಸಂದಾಗುತ್ತೆ ಮನ್ ಮೋಜು ತುಂಬುತ್ತೆ.

ಹಲಸಿನ ಹಣ್ಣು ಬಲ್‌ಪಸಂದ್. ತಕ್ಲೀಫ್ ತೊಗೊಂಡರೆ ತಾರೀಫ್ ಮಾಡ್ತಾನೆ.

"ಬಚ್ಚ"

ದುಃಖಳಂಕ ಮೊಲ್ಲುಮಾರ್ಜುನನ ಸ್ವತಂತ್ರ ವಚನಗಳು

[ರಾಜಾಜಿಯು ಸ್ವತಂತ್ರಪಕ್ಷ ರಚಿಸಿದರೆಂಬುದು ಎಲ್ಲರಿಗೂ ಈಗ ತಿಳಿದಿದೆ. ಬುದ್ಧಿಯ ಸಂಕೋಲೆಗಳನ್ನು ಹೊಂದಿದ ಹಲವಾರು ಕಿರಿಯರಿಗೆ, ಆಲೋಚನಾ ಮಾರ್ಗ, ಜ್ಞಾನಮಾರ್ಗಗಳೇ ಆಧ್ಯಾತ್ಮಿಕ ಪ್ರಗತಿಗೆ ಹಾದಿ ಎಂದು ಎನಿಸಿತ್ತು. ಅಂತಹವರಿಗೆ ರಾಜಾಜಿಯ ಸೂಕ್ಷ್ಮಮತಿ, ತೀವ್ರ ಆಲೋಚನಾ ಚತುರತೆಯೇ ಬಾಳ ದೀವಿಗೆಗಳಾಗಿತ್ತು. ಅಂತಹ ಹೇಳ ಹೆಸರಾದ ಗುರುಗಳೆನಿಸಿಕೊಂಡವರು, ಈ ಕಾರ್ಯ ಈ ವಯಸ್ಸಿನಲ್ಲಿ ಕೈಕೊಂಡರೆಂದರೆ, ಜೀವನದ ಸುಖವನ್ನು ಮೆಲ್ಲುತಿರುವ ಹಾಗೂ ಅರ್ಜುನನಂತೆ ಅರಿವ ಬಯಸಿದ ಕಿರಿಯರಿಗೆ, ಆ ಹಿರಿಯ ಗುರುಗಳನ್ನೂ ಕಂಡು ಮೋಳಿಗೆ ಮಾರಯ್ಯನೇ "ಗತಿ" ಎಂದೆನಿಸಿತು. ಅಂತಹವರಿಗೆ ದುಃಖ ಅನಿವಾರ್ಯ. ಅವರೊಲ್ಲಬ್ಬ ಭವಿ. ದುಃಖಳಂಕನಾಗಿ, ಮೆಲ್ಲುತ್ತಾ ಅರ್ಜುನನಂತೆ ಹಿರಿಯಾತ್ಮನ ವಚನಗಳನ್ನು ನುಡಿದು ಕೊಂಡಪರಿ ಇದು. ಇದರಲ್ಲಿ ನಗುವಿದೆಯೇ?

ಮೆರವಣಿಗೆಯಲ್ಲಿ ಜಾರಿಬಿದ್ದು ಕಿರೀಟ ಮಣ್ಣಾದಾಗ ಅರಸನನ್ನು ಕಂಡು ಗುಲಾಮರು ಕೂಡ ನಗುಲ್ಲವೇ ?]

ಎನ್ನ ಪಿತ್ತಕ್ಕೆ ಸಾ ಕಾರವಾಗಿ ಬಂದೆಯಯ್ಯಾ ರಾಜಾಜಿ !
ಎನ್ನ ಸೊಕ್ಕಿಂಗೆ ಕ್ಷಾರ ತುಂಬಿದೆಯ್ಯಯ್ಯಾ ರಾಜಾಜಿ
ಎನ್ನ ಮನವನ ಪ್ಪ ಳಿಸಿ ಗೊಂದಲ ಹೂಡಿದೆಯ್ಯಯ್ಯಾ ರಾಜಾಜಿ
ಎನ್ನ ತನುವಿನ ನಿ ಲುವನ್ನೇ ಬೇರಿಡಿಸಿದೆಯಯ್ಯಾ ರಾಜಾಜಿ
ಎನ್ನ ಮತಿಗೆ ಗು ಮ್ಮ ನಾಕಾರದಿ ಬಂದೆಯಯ್ಯಾ ರಾಜಾಜಿ
ಎನ್ನ ಶಕ್ತಿಗೆ ಸ್ವಾ ರ್ಥವನು ತುಂಬಿದೆಯ್ಯಯ್ಯಾ ರಾಜಾಜಿ
ಎನ್ನ ವಿರಕ್ತಿಗೆ ತಂ ಗಳನೆ ಎಡೆ ಇಟ್ಟೆಯಯ್ಯಾ ರಾಜಾಜಿ
ಎನ್ನ ಅರಿವಿಗೆ ತ್ರ ಯ ತಾಪಗಳನೊಡ್ಡಿದೆಯಯ್ಯಾ ರಾಜಾಜಿ
ಎಂತಪ್ಪ ಮಹಾ ಪ್ರಣಮಂಗಳ ರಾಜಾಜಿ ತನ್ನ ಮಠಕ್ಕೆ ತಾನೇ ಕೊಡಲಿ ಇಟ್ಟು
ಅಳಿವ ಅಹಂಕಾರಕ್ಕೆ ಆಜ್ಯ ಹುಯ್ದು ಬೆಳೆಸುತ್ತಿರೆ,
ದುಃಖಳಂಕ ಮೆಲ್ಲುವಾರ್ಜುನ ಭಕ್ತರತ್ತ ಬಿದ್ದನಯ್ಯಾ !

* * * *

ಉಂಬ ಊಟ ನಿನಗೋ ಅಶನಕ್ಕೋ ಎಂಬದನರಿ. ಮಾಡುವ ಭಕ್ತಿ
ಮಾಡುವಂಗೋ ಮಾಡಿಸಿ ಕೊಂಬುವಂಗೋ ಎಂಬುದ ತಿಳಿದ ಮತ್ತೆ
ಹೋರಾಡಿ ಜರ್ಝರವಗೈಯಲೇಕೆ ? ಹೊನ್ನು ಮಣ್ಣು ಹೆಣ್ಣು ಹೊತ್ತು
ಬಪ್ಪಂತೆಗೈವಾ ಸ್ವತಂತ್ರವೇಕೋ ಎಂದ ದುಃಖಳಂಕ ಮೆಲ್ಲುವಾರ್ಜುನಾ !

* * * *

ಎನ್ನ ಸ್ವಾತಂತ್ರದಿಂದ ದೇಶ ನೋಡಿಹೆನೆಂದೊಡೆ, ನೀ ಪರತಂತ್ರ
ದೇಶದ ಸ್ವಾತಂತ್ರ ಎನ್ನಲ್ಲಿ ಕರಿಗೊಂಡು ಎನ್ನ ಧೃಡ, ದೇಶದಧೃಡವಾಗಿ ನಿಂದಲ್ಲಿ
ಸ್ವಾತಂತ್ರ ಸಿಗಬಹುದೋ ಎಂದು ಕೊರಗಿದನಾ ದುಃಖಳಂಕ ಮೆಲ್ಲುವಾರ್ಜುನಾ!

* * * *

ಕಟ್ಟಿಗೆ ಕಸ ನೀರು ಹೊತ್ತು ದೇಶಭಕ್ತರನಲ್ಲದೆ ಬೇಡೆನೆಂದು, ಅವರು ಕರ್ತೃ ನಾನು ತೊತ್ತೆಂದು ಅವರು ಒಕ್ಕುದ ನೀಸುಕೊಂಡು ಬಂದು, ತನ್ನ ಕೃತ್ಯದೆ ನೇಮ ತಪ್ಪದೆ, ಆಗಲಿ ತನ್ನ ಸತಿ ಸುತ ಬಂಧು ದೇವರು ಮುಂತಾಗಿ ದೇಶಾರ್ಚನೆಯ ಮಾಡಬೇಕಲ್ಲದೆ, ಇಂದಿಗೆ ನಾಳೆಗೆಂದು ಸಂದೇಹವ ಮಾಡಿದೊಡೆ, ಪ್ರಸಾದ ಬರ್ಪುದೇ ಎಂದು ನೊಂದು ನುಡಿದ ದುಃಖಳಂಕ ಮೆಲ್ಲುಕಾರ್ಜುನಾ !

* * * *

ಕದ್ದ ಕಳವ ಮರಸಿಕೊಂಡು ನಾ ಧರ್ಮದರ್ಶಿಯೆಂದು ನುಡಿವಾ ಮಾಯೆಯ ನೋಡಿ
ಮುಸುಕಿನಲಿ ಸಿರಿಯಗಳಿಸಿ, ಆ ಸಿರಿಯು ಕೈಯ್ಯಲ್ಲಿದ್ದ ಮತ್ತೆ ಧರ್ಮದರ್ಶಿತ್ವಉಂಟೇ!
ಇಂತೀ ಧರ್ಮದರ್ಶಿಗಳ ಕಂಡು, ಮರುಗುತಿದ್ದನಾ ದುಃಖಳಂಕ ಮೆಲ್ಲುವಾರ್ಜುನಾ !

* * ೬ *

ಕಂಪೆನಿಯ ಹೆಸರಿನಲಿ ಬಂದಿರಿವಾತ ಕಳ್ಳನಲ್ಲದೆ ಧೀರನಲ್ಲ.
ಅಲಗಿನ ಕಾನೂನು ಮೊನೆಯು ಗತಿ ತಪ್ಪಿದಡೆ, ವಾಸವಳಿದು ಬಿದ್ದವನು
ಉಸಿರೆತ್ತಿ ನಿಂದೊಡೆ, ಈ ಕಸ ಕಡ್ಡಿಗಳ ಪಾಡು ಊಹಿಸಲಾರದೆ
ನೊಂದನಯ್ಯಾ ದುಃಖಳಂಕ ಮೆಲ್ಲುವಾರ್ಜುನಾ !

* * * *

ಇತರರ ಕಾಯದ ಕರದಲ್ಲಿ ನಂಬುಗೆಯ ನಿಟ್ಟು, ಬಾಯಾರಿ ಭವಗೆಟ್ಟು ನಾಡ ಹೆಸರಿಟ್ಟು ನಾನಾರೆಂಬುದನರಿಯದೆ, ಎದುರು ಇಚ್ಛೆ ಏನೆಂದರಿಯದೆ, ಕಾಯದ ಸುಖಕ್ಕಾಗಿ ಸ್ವಾತಂತ್ರ ಬೇಡುವ ಪರ ತಂತ್ರರನು ಕಂಡು ಕಣ್ಣೀರಿಟ್ಟನಯ್ಯಾ ದುಃಖಳಂಕ ಮೆಲ್ಲುವಾರ್ಜುನ !


ಬಾಳರಾತ್ರಿ ಎಂಬ ಕತ್ತಲೆಯ ಮನೆಯ ಹೊಕ್ಕು, ಜೋಳಿಗೆಯ ಮುದ್ರೆ
ನೋಡುವನಂತೆ
ಸಭಾ ಸಭೆಗಳನು ಹೊಕ್ಕು, ನಭವ ಸೀಳಿದನೆಂಬಂತೆ,
ಗಡಿಗೆಯಲಿ ಸಮುದ್ರವ ತುಂಬಿ ಅಡಗಿಸಿದೆನೆಂಬಂತೆ,

ಸರ್ವವನೊಡಗೂಡಿ ಹರಿದಾಡುತ್ತ, ಸಡಗರಿಸುತ್ತ, ಲಲನೆಯರ ನೊಡಗೂಡುತ್ತ, ರಮಣಂಗಳಲ್ಲಿ ಬಡಿಹೋರಿಯಾಗುತ್ತ, ಸ್ವಾತಂತ್ರ್ಯನೆಂಬುವರನೋಡಾ! ದೇಶದಲಿ ಕನಸಿನಲಿ ತಾ ಸತ್ತೆನೆಂದು ಎಚ್ಚತ್ತು ಅಳುವ ಕುಚಿತ್ತ ಹಿರಿಯರ ಕಂಡು ಅತ್ತನಾ ದುಃಖಳಂಕ ಮೆಲ್ಲುವಾರ್ಜುನಾ!!

* * * *

ಗಾಣದಲ್ಲಿ ಸಿಲುಕಿದ ಎಳ್ಳು ನೋಯದೆ ಎಣ್ಣೆಯ ಬಿಡುವುದೇ?
ಕಾಯದಲ್ಲಿ ಸಿಲುಕಿದ ಜೀವ ನೋಯದೆ ಸ್ವಾತಂತ್ರವನು ಬಿಡುವುದೇ?
ಭಾವದಲ್ಲಿ, ಬರಿ ಮಾತುಗಳಲ್ಲಿ ಸಿಲುಕಿದ ಭ್ರಮೆ ನೋಯದೆ ವಿಕಾರವಬಿಡುವುದೇ?

ಇಂತೆದೆಲ್ಲವನರಿಯದೆ ಜ್ಞಾನಲೇಪವಿಲ್ಲದೆ ನರಳುವ ಹಿರಿಯರ ಕಂಡು ಮರುಗಿದನಾ ದುಃಖಳಂಕ ಮೆಲ್ಲುವಾರ್ಜುನಾ!



ಬೇಸ್ತು

ಮೊನ್ನೆ ಬೆಳಗಾಂನಿಂದ ಹೊರಟು ಬೆಂಗಳೂರು ತನಕ ರೈಲಿನಲ್ಲಿ ಬಂದೆ. ದೂರ ಪ್ರಯಾಣದವರಿಗೆ ಬೇರೆ ಡಬ್ಬಿಯಿರುತ್ತದಲ್ಲ—ಅದರ ತುಂಬ ಬೆಂಗಳೂರು ಪ್ರಯಾಣಿಕರೇ ಇದ್ದರು. ಹೆಚ್ಚಿನವರು ನೌಕರರು, ಅಥವಾ ನೌಕರಿ ಬೇಟೆಗೆ ಹೊರಟವರು. ಒಂದು ಟ್ರಾನ್ಸ್‌ಫರು, ಒಂದು ಪ್ರಮೋಶನ್, ಒಂದು ಇಂಕ್ರಿಮೆಂಟ್—ಹೀಗೆ ಏನೇನೋ ಆಸೆಗಳನ್ನು ಕೈಗೂಡಿಸಿಕೊಳ್ಳಲು ರಾಜಧಾನಿಗೆ ಹೊರಟಿದ್ದಿರಬೇಕು, ಪಾಪ. ಡಬ್ಬಿಯಲ್ಲಿದ್ದ ಅಧಿಕ ಪ್ರಸಂಗಿಗಳೊಬ್ಬರು ಎಲ್ಲರನ್ನೂ ಮಾತಾಡಿಸಿ ಪ್ರಯಾಣದ ಕಾರಣವನ್ನು ಕೇಳಿದರು. ಕೆಲವರೇನೋ ಮುಚ್ಚು ಮರೆಯಿಲ್ಲದೆ ಇದ್ದಕ್ಕಿದ್ದ ಹಾಗೆ ಕಾರಣ ತಿಳಿಸಿ ಹಲ್ಲುಕಿರಿದರು. ಆದರೆ ಇನ್ನು ಕೆಲವರು ಏನೋ ಕೆಲಸ ಇದೆ ಎಂದು ಸುಮ್ಮನಾದರು. ಆಗ ಅ. ಪ್ರಸಂಗಿಗಳು ನನ್ನ ಕಿವಿಯಲ್ಲಿ "ಈ ಗುಟ್ಟಿನ ಮಂದಿ influenza ಹಿಡಿದದರಿರಬೇಕು" ಎಂದುಸುರಿದರು.

"ಹಾಗೆಂದರೆ?"

"Influenza ಗೊತ್ತಿಲ್ಲವೆ? Influence ಮಾಡಿ ಜಾಬು ಗಿಟ್ಟಿಸುವ ಪ್ರಯತ್ನಕ್ಕೆ ಹೊರಟವರು. ಹೌದೋ ಅಲ್ಲೋ ನೋಡಿ" ಎಂದುಬಿಟ್ಟು ಗಟ್ಟಿಯಾಗಿ ಒಂದು ಕತೆ ಹೇಳಲು ಪ್ರಾರಂಭಿಸಿದರು. ಉಳಿದವರೆಲ್ಲಾ ಕಕ್ಕಾಬಿಕ್ಕಿಯಾಗಿ ಕೇಳಿದೆವು.

ಅಬ್ರಾಹಂ ಲಿಂಕನ್ ಗುಡಿಸಲ್ನಲ್ಲಿ ಹುಟ್ಟಿ ಆಮೇಲೆ ಅಮೇರಿಕದ ಅಧ್ಯಕ್ಷನಾದನಲ್ಲ. ಆತನ ಕೂಡೆ ಬೇಡಿ ಕಾಡಿ ದೊಡ್ಡ ಹುದ್ದೆ ಗಳಿಸುವುದಕ್ಕೆ ನೂರಾರು ಮಂದಿ ಬರತೊಡಗಿದರಂತೆ. ಒಂದು ದಿನ ಅಂಥ ಇಪ್ಪತ್ತು ಮೂವತ್ತು ಮಂದಿ ಮಣಗಟ್ಟಲೆ ಶಿಫಾರಸು ಪತ್ರಗಳೊಡನೆ ಬಂದು ಕಾಯುತ್ತಿದ್ದರಂತೆ. ಆಗ ಲಿಂಕನ್ ಅವರನ್ನುದ್ದೇಶಿಸಿ ಒಂದು ಕಥೆ ಹೇಳಿದನಂತೆ.

"ಒಬ್ಬಾನೊಬ್ಬ ಅರಸನಿದ್ದ. ಆತನಿಗೆ ಒಬ್ಬ ಮಂತ್ರಿ ಇದ್ದ. ಮಂತ್ರಿ ಸಲಹೆ ಪ್ರಕಾರ ಅರಸ ನಡಕೊಳ್ತಿದ್ದ. ಅರಸನಿಗೆ ಒಂದು ದಿನ ಬೇಟೆಗೆ ಹೋಗೋ ಮನಸ್ಸಾಯಿತು. ಮಂತ್ರಿಯನ್ನು ಕರೆದು "ಏನಯ್ಯ ಇವತ್ತು ಮಳೆ ಬರುತ್ತೆಯೇ?" ಎಂದು ಕೇಳಿದ. ಮಂತ್ರಿ ಇಲ್ಲ ಎಂದ. ಸರಿ. ತನ್ನ ಪರಿವಾರ ಸಮೇತ ಅರಸ ಬೇಟೆಗೆ ಹೊರಟುಹೋದ.

ಅರಸ ಹೋಗ್ತಿರುವಾಗ ಒಬ್ಬ ರೈತರವನು ಹೇಸರಕತ್ತೆ ಮೇಲೆ ಸವಾರಿ ಮಾಡ್ತಾ ಬರ್‍ತಿದ್ದ. ಅರಸನನ್ನು ಕಂಡು ಈಗ ಮಳೆ ಬರುತ್ತೆ ಹಿಂದಕ್ಕೆ ಹೋಗಿಬಿಡಿ ಎಂದ. ಅರಸ ಅವನ ಮಾತಿಗೆ ಕಿವಿಗೊಡದೆ ಮುಂದಕ್ಕೆ ಹೋದ. ಮಳೆ ಸುರಿದೇ ಸುರಿಯಿತು. ಅರಸ ಮತ್ತು ಪರಿವಾರದವರು ಪೂರ್ತಿ ಒದ್ದೆ ಆದರು.

ಅರಮನೆಗೆ ಹಿಂದಿರುಗಿದ ಕೂಡಲೆ ಅರಸ ಮಂತ್ರಿಯನ್ನು ಥರಾಟೆಗೆ ತೆಗೆದು ಕೊಂಡ. ರೈತನನ್ನ ಕರೆಸಿ "ಮಳೆ ಸುರಿಯುತ್ತೆ ಅನ್ನೋದು ನಿನಗೆ ಹೇಗಯ್ಯ ತಿಳಿಯಿತು ?" ಎಂದು ಕೇಳಿದ.

"ನನ್ನ ಹೇಸರಗತ್ತೆ ಹೇಳಿತು, ಬುದ್ಧಿ" ಎಂದ ರೈತ.

"ಕತ್ತೆ ಹೇಗಯ್ಯ ಹೇಳಿತು ?"

"ಕತ್ತೆ ತನ್ನ ಕಿವಿ ನಿಮಿರಿಸುತು, ಬುದ್ಧಿ"

ಸರಿ. ಅರಸ ತಡಮಾಡದೆ ಕತ್ತೆಯನ್ನು ತರಿಸಿ ಅದಕ್ಕೆ ಮಂತ್ರಿಯ ಸ್ಥಾನ ಕೊಟ್ಟ.

"ಅರಸ ಇಲ್ಲಿ ದೊಡ್ಡ ಪ್ರಮಾದ ಮಾಡಿದ" ಎಂದ ಲಿಂಕನ್.

"ಅದು ಹೇಗೆ ?" ಎಂದು ಪ್ರಶ್ನಿಸಿದರು ಸುತ್ತಮುತ್ತ.

"ಹಾಂ ಅದೇ ನೋಡಿ ; ಅಂದಿನಿಂದ ಇಂದಿನವರೆಗೂ ಪ್ರತಿಯೊಂದು ಹೇಸರಗತ್ತೆಯೂ ತನಗೊಂದು ಸ್ಥಾನ ಬೇಕೆನ್ನುತ್ತಿದೆ" ಎಂದನಂತೆ ಲಿಂಕನ್. ಆಗ ಸ್ಥಾನ ಬೇಡಲು ಬಂದವರು ಏನು ಮಾಡಿದರೋ ಗೊತ್ತಿಲ್ಲ. ವೃತ್ತಾಂತ ಇಷ್ಟರ ತನಕ ಬರುವಾಗ ಕರ್ಜಗಿ ಸ್ಟೇಶನ್ ಬಂದಿತ್ತು. ಮಸಾಲೆ ವಡೆ ಮೆದ್ದು ಚಹಾ ಹೀರೋದಕ್ಕೆ ಎಲ್ಲರೂ ಕೆಳಕ್ಕೆ ನೆಗೆದರು. ಅವರಲ್ಲಿ ನಾಲ್ಕಾರು ಮಂದಿ ಠಾಕೋ ಠೀಕಿನ ಮಂದಿ ಮುಖ ಕಪ್ಪುಮಾಡಿಕೊಂಡು ಕೆಳಗಿಳಿದನರು ಮತ್ತೆ ನಮ್ಮ ಡಬ್ಬಿಗೆ ಹಿಂದಿರುಗಲೇ ಇಲ್ಲ.

"ಅಗೋ ಅವರೇ ಹುದ್ದೆ ಗಿಟ್ಟಿಸ ಹೊರಟ influenza ಮಂದಿ. ಏನೇ ಇರಲಿ ಕಾಲುಚಾಚಿ ನಿದ್ದೆ ಹೊಡೆಯೋದಕ್ಕೆ ಜಾಗವಾದರೂ ಸಿಕ್ಕಿತು" ಎಂದ ಆ ಪ್ರಸಂಗಿ.

"ಲಿಂಕನ್ ಕೊಟ್ಟಿದ್ದೇ ಬೇಸ್ತು. ನಿಮ್ಮದು ಬಡಾ ಬೇಸ್ತು ಕಣ್ರೀ" ಎಂದೆ.

"ಅಂತೂ ಉದ್ದೇಶ ಸಾಧಿಸಿತಲ್ಲ" ಎಂದು ಹಲ್ಗಿರಿದು ಎದುರಿನ ಸೀಟಿನಮೇಲೆ ಕಾಲು ಚೆಲ್ಲಿ ಸಿಗರೇಟು ಹಚ್ಚಿದ ಆ ಧೂರ್ತ.—ಆ ಪ್ರಸಂಗಿ.

—ರಾಮಿ

ನಾನು ನೋಡಿ ಬಿಟ್ಟಿದ್ದೆ ಕಣಯ್ಯ

ನಂಜುಂಡ ಶಾಸ್ತ್ರಿಗಳು ಯಾವುದಕ್ಕೂ ' ನೋಡಿ ಬಿಟ್ಟಿದ್ದೇ ಕಣಯ್ಯ ! " ಅಥವಾ " ನಾನು ಮಾಡಿ ಬಿಟ್ಟದ್ದೇ ಕಣಯ್ಯ ! " ಎನ್ನುತ್ತಿದ್ದರು. ಅದನ್ನು ಕೇಳಿದವರನೇಕರು ಶಾಸ್ತ್ರಿಗಳು ಮಾಡಿದ್ದು, ಹೇಳಿದ್ದು, ಕೇಳಿದ್ದು, ಇತ್ಯಾದಿ ಅನೇಕ ಪ್ರಕರಣಗಳನ್ನು ಸೇರಿಸಿಕೊಂಡಿದ್ದರು :—

' ನೀರಾ ' ಎಂದರೆ—

" ನಾನು ಕುಡಿದು ಮಡಕೆಯಲ್ಲಿ ಬಿಟ್ಟದ್ದೇ ಕಣಯ್ಯ ! " ಎನ್ನುವರು.

' ನಾರಿ ' ಎಂದರೆ

" ನಾನು ನೋಡಿ ಬಿಟ್ಟದ್ದೇ ಕಣಯ್ಯ ! " ಎನ್ನುವರು.

' ನರಿ ' ಎಂದರೆ—

" ನಾನು ಮೋಸ ಹೋಗಿ ಬಿಟ್ಟಿದ್ದೇ ಕಣಯ್ಯ ! ' ಎನ್ನುವರು.

' ನೆರಿಗೆ ' ಎಂದರೆ—

" ನಾನು ಮಗುಡಕ್ಕೆ ಹಿಡಿದಿಟ್ಟದ್ದೇ ಕಣಯ್ಯ ! " ಎನ್ನುವರು.

' ನಡಿಗೆ ' ಎಂದರೆ—

" ನಾನು ನಡೆದು ಬಿಟ್ಟದ್ದೇ ಕಣಯ್ಯ ! " ಎನ್ನುವರು.

' ನುಡಿಗೆ ' ಎಂದರೆ—

" ನಾನು ದುಡಕಿ ನುಡಿದದ್ದೇ ಕಣಯ್ಯ ! " ಎನ್ನುವರು.

' ತೊಡಿಗೆ ' ಎಂದರೆ—

" ನಾನು ತೊಟ್ಟುಕೊಂಡು ಬಿಟ್ಟದ್ದೇ ಕಣಯ್ಯ ! " ಎನ್ನುವರು.

‘ ಅಡಿಗೆ ’ ಎಂದರೆ—

“ ನಾನು ಮಡಿಕಟ್ಟಿಕೊಂಡು, ಅಡಿಗೆ ಮಾಡಿ, ಉಂಡುಮಿಕ್ಕಿದ್ದೇ ಕಣಯ್ಯ ! ” ಎನ್ನುವರು.

‘ ಮೊಳಕಾಲ್ಮುರು ’ ಎಂದರೆ—

“ ನಾನು ಮೊಣಕಾಲು ಮುರಿದುಕೊಂಡದ್ದು ಅಲ್ಲೇ ಕಣಯ್ಯ ! ” ಎನ್ನುವರು.

‘ ತಿರುಪತಿ ’ ಎಂಧರೆ—

“ ನಾನು ತಿರುಗಿ ತಿರುಗಿ ತಿರುಕನಿಗೆ ಕಾಸು ಕೊಟ್ಟದ್ದು ತಿರುಪತಿಯಲ್ಲೇ ಕಣಯ್ಯ ! ” ಎನ್ನುವರು.

‘ ಸ್ವೀವರ್ಡ್ಸ್ ’ ಎಂದರೆ—

“ ನಾನು ಏರೋಪ್ಲೇನಿನಲ್ಲಿ ಹೋದಾಗ ಕಣ್ಣುಮುಚ್ಚಿದರೆ, ಕಣ್ಣುಬಿಟ್ಟರೆ, ಕಾಣುತ್ತಿದ್ದುದು ಅವಳೇ ಕಣಯ್ಯ ! ” ಎನ್ನುವರು.

‘ ಎಲೆಕ್ಟ್ರಿಸಿಟಿ ’ ಎಂದರೆ—

“ ನಾನು ಷಾಕು ಹೊಡೆಸಿಕೊಂಡು ಬಿಟ್ಟದ್ದೇ ಕಣಯ್ಯ ! ” ಎನ್ನುವರು.

‘ ತೆಂಗಿನಕಾಯಿ ’ ಎಂದರೆ—

“ ನಾನು ಜುಟ್ಟು ಹಿಡಿದು ಗಟ್ಟಿಯಾಗಿ ಹೊಡೆದು ಎಳೆನೀರು ಕುಡಿದು ಬಿಟ್ಟದ್ದೇ ಕಣಯ್ಯ ! ” ಎನ್ನುವರು.

“ ಪ್ಯಾರಿಸ್ಸು ” ಎಂದರೆ—

“ ನಾನು ಪಾಂಡಿಚೆರಿಯಲ್ಲಿ ಕಂಡುಬಿಟ್ಟದ್ದು ಅದೇ ಕಣಯ್ಯ ! ” ಎನ್ನುವರು.
“ಬೀಚು” ಎಂದರೆ—

“ ಎಳೆ ನಿಂಬೆಕಾಯಿ ಹೀಚುಗಳಿಗೆಲ್ಲ ಏನು ಗೊತ್ತು ಬೀಚಿನ ಸ್ವಾರಸ್ಯ, ನಾನು ಕಂಡುಬಿಟ್ಟದ್ದೇ ಕಣಯ್ಯ ! ” ಎನ್ನುವರು.

ಇತ್ಯಾದಿ

—ಡೂನು

ಸೇಡು

ಉತ್ತರದವರು ಓಡಬೇಕು, ಜನಿವಾರ ಹರಿಯಬೇಕು, ದ್ರಾವಿಡ ನಾಡು ಮೂಡಬೇಕು—ಇದೇ ಮೂಲ ಮಂತ್ರ ಕುಪ್ಪಯ್ಯಗೆ—ಕಪ್ಪಂಗಿ ಕುಪ್ಪಯ್ಯಗೆ.


ಆದೋಡೇನ್ ! ಉತ್ತರದ ವಿಶ್ವವಿದ್ಯಾನಿಲಯದಲ್ಲೊಂದು ಸ್ಕಾಲರ್ಷಿಫ್ ದೊರೆವುದೆಂದಾಗ, ಬಿ. ಏ ಮುಗಿಸಿದ ಮಗಳು "ನಾ ಹೊರಟೆ" ಎಂದು ಎದ್ದು ನಿಂತಾಗ, "ಉತ್ತರದ ಗೊಡವೆ ಬೇಡ ಮಗಳೇ" ಎಂದು ಅಂಗಲಾಚಿದರೂ ಕಿವಿಗೊಡದೆ ಆಕೆ ಡಿಲ್ಲಿಗೆ ದೌಡೋಡಿದಾಗ, ದಕ್ಷಿಣಕೆ ಮುಖ ಮಾಡಿ ನಿಟ್ಟುಸಿರುಗರೆದ ಕುಪ್ಪಯ್ಯ—ಕಪ್ಪಂಗಿ ಕುಪ್ಪಯ್ಯ,

ಬರತೊಡಗಿದವು ಮಗಳ ಕಾಗದಗಳು. ಅದ ಕಂಡು ತಾಯಿ ತಲೆ ತಲೆ ಹೊಡಕೊಂಡಳು. ಕಾಲೇಜಿನಲಿ ಉತ್ತರದ ಹುಡುಗನೊಬ್ಬನ ಪ್ರೇಮಿಸಿಹಳಂತೆ; ಸಾಲದ್ದಕ್ಕೆ ಜನಿವಾರದವನಂತೆ, ಮದುವೆಯಾಗುವಳಂತೆ, ಪ್ರಾಣ ಹೋದರು ನಿರ್ಧಾರ ಬದಲಿಸಳಂತೆ, ಅಯ್ಯೋಡಾ ! ಹುಟ್ಟುಮಾರಿ ಹುಡುಗಿಯನು ಪಡೆದೆನಲ್ಲ ಎಂದು ರೋದಿಸಿದ ಕುಪ್ಪಯ್ಯ—ಕಪ್ಪಂಗಿ ಕುಪ್ಪಯ್ಯ.

ಕೊನೆಗೊಮ್ಮೆ ತನ್ನೊಳು ತಾನೆ ಸಮಾಧಾನ ತಂದುಕೊಳಲೆತ್ನಿಸಿದ. ಹೌದು ಹಯವರಟು, ಹಟಮಾರಿ ಹೆಣ್ಣು ಅದು. ಉತ್ತರದ ಜನಿವಾರದವ ಹಿಡಿಯಲವಳ ಕೈಯ ; ಅನುಭವಿಸಲಿ ಮುಂದೆ ; ಇರಲಿ ಇದೂ ಒಂದು ಸೇಡು ಎಂದು ಮಂದಸ್ಮಿತನಾದ ಕುಪ್ಪಯ್ಯ—ಕಪ್ಪಂಗಿ ಕುಪ್ಪಯ್ಯ.

(ದಕ್ಷಿಣೋತ್ತರ ಸಮಸ್ಯೆಯಿರುವ ಅಮೆರಿಕದಲ್ಲೂ ಒಬ್ಬ ಕುಪ್ಪಯ್ಯಹೀಗೆ ಅಂದನಂತೆ)

—ರಾಮಿ



ಲಂಡನ್

14—8—59

ಕೊರವಂಜಿ—

ಸಂಪಾದಕರಲ್ಲಿ ಸವಿನಯ ಸಾಷ್ಟಾಂಗಗಳು—ಆದಾಗಿ ಉಭಯ ಕುಶಲೋಪರಿ ಸಾಂಪ್ರತ.

ಈ ಗಾಂಪರೊಡೆಯರ ಗುಂಪಿನ ವರದಿ ಮಾಡುವ ಸಾಹಸಕ್ಕೆ ನಾನೇ ಒಪ್ಪಿಕೊಂಡಿದ್ದು ತಪ್ಪು ಎಂದೊಮ್ಮೆ ಅನ್ನಿಸಿದರೆ—ಮತ್ತೊಮ್ಮೆ ನಾನಲ್ಲದೆ ಅವರನ್ನು ಮತ್ತಾರು ಅರ್ಥ ಮಾಡಿಕೊಂಡಾರು ಎಂದೆನ್ನಿಸುತ್ತದೆ.

ಇವರುಗಳ ವ್ಯವಹಾರ ಬಹಳ ವಿಚಿತ್ರವಾಗಿದೆ. ಈ ದೂರ ದೇಶದ ಹಾರಾಟ—ಓಡಾಟಗಳ ನಡುವೆ ನನಗೆ ಕ್ರಮವಾಗಿ ವರದಿ ಮಾಡಲು ಅವಕಾಶ ಸಾಲದಾಗಿದೆ. ಅದರಿಂದಾಗಿ ಪ್ರತಿ ತಿಂಗಳ ವರದಿ ಕ್ರಮ ತಪ್ಪಿದರೆ ಅದು ಗಾಂಪರ ತಪ್ಪಲ್ಲ ನನ್ನದು.

ಈ ಗುರು ಶಿಷ್ಯರನ್ನು ಹಿಂಬಾಲಿಸುವ ಕೆಲಸ ಬಹಳ ಕಠಿಣ. ಮೊನ್ನೆ ಹೈಡ್ ಪಾರ್ಕಿನಲ್ಲಿ ಮಂಕ—ಸೋಪ್ ಬಾಕ್ಸ್—ಭಾಷಣ ಮೂಲೆಯಲ್ಲಿ ನಿಂತು ಮಾತನಾಡಲಿಕ್ಕೆ ಪ್ರಾರಂಭಿಸಿಬಿಟ್ಟ. ಈ ಜಾಗದಲ್ಲಿ ಯಾರು ಏನು ಭಾಷಣ ಮಾಡಿದರೂ ಯಾರೂ ತಡೆಯುವುದಿಲ್ಲ. ಅವನ ಅನೇಕ ಭಾಷಣ ಪ್ರಯತ್ನಗಳನ್ನು ಮುರಿದು ಹಾಕಿದ ಮಠದವರು ಈ ಭಾಷಣಕ್ಕೆ ಅಡ್ಡಿ ಬರುವಂತೆ ಇರಲಿಲ್ಲ.

ಸಂಜೆ—ಆರರ ಸಮಯ—ಪಶ್ಚಿಮಾಭಿಮುಖನಾದ ಭಾನುದೇವನು ಈ ಮಂಕನ ಭಾಷಣವನ್ನು ಕೇಳಲಾರದೆಯೋ ಎಂಬಂತೆ ವೇಗವಾಗಿ ಮೋಡಗಳ ಮರೆಯಲ್ಲಿ ಕಿವಿ ಮುಚ್ಚಿಕೊಂಡು ಇಳಿಯುತ್ತಿದ್ದಾನೆ. "ಸಿಕ್ಕಿತೋ ಸಿಕ್ಕಿತೋ" ಎಂದು ಒಮ್ಮೆಲೇ ಕೂಗಿದ ಮಂಕ ಭಾಷಣವೇದಿಕೆಯನ್ನೇರಿ ಕ್ಷಣ ಮಾತ್ರದಲ್ಲಿ ನಿಂತಿದ್ದ, ಗುರುಗಾಂಪರು ಮಡೆಯ—ಮರುಳರು ಏನೂ ಉಪಾಯ ಕಾಣದಾದರು. ಮಡ್ಡಿ ಹೋಗಿ ಅವನ ತೋಳು ಹಿಡಿದ ಹತ್ತಿರದಲ್ಲೇ ಇದ್ದ ಲಂಡನ್ ಮೆಟ್ರೊಪಾಲಿಟನ್ ಪೋಲೀಸಪ್ಪ ಮಡ್ಡಿಯ ತೋಳು ಹಿಡಿದ. ಅಲ್ಲಿ ಭಾಷಣ ಮಾಡುವವರನ್ನು ತಡೆದರೆ ಅರೆಸ್ಟ್ ಮಾಡಬಹುದು.

ಮಂಕನ ಮಾತಿನ ಮಾಲೆಗೆ ನಾವು ಕಿವಿಗೊಡಲೇಬೇಕಾಯ್ತು. ಇಡೀ ಕರ್ನಾಟಕಕ್ಕೆ ಕೀರ್ತಿ ತರುವ ಭಾಷಣ ಅದು. ಅಚ್ಚ ಕನ್ನಡದಲ್ಲಿ ಲಂಡನ್ನಿನ ಹೈಡ್ ಪಾರ್ಕಿನಲ್ಲಿ ಮೊಟ್ಟ ಮೊದಲು ಭಾಷಣ ಮಾಡಿದ ಕೀರ್ತಿ ಗಾಂಪರೊಡೆಯರ ಮಠದ ಮಂಕನಿಗೆ ಸಲ್ಲಬೇಕು. ಸುತ್ತಲಿದ್ದ ಜನ ಮುಖ ನೋಡಿಕೊಂಡರು.


ಅನೇಕರಿಗೆ ಇದು ಯಾವ ಭಾಷೆ ಎಂದು ಅರ್ಥವಾಗಲಿಲ್ಲ ಕೆಲವರು "ಹಿಬ್ರೂ" ಅಂದರು. ಮತ್ತೆ ಕೆಲವರು ಲ್ಯಾಟಿನ್ or ಗ್ರೀಕ್ ಇರಬೇಕೆಂದು ಶಂಕಿಸಿದರು. ಮತ್ತೆ ಕೆಲವರು ಇದು ಬುಧ ಅಥವ ಶನಿಗ್ರಹದಲ್ಲಿರಬಹುದಾದ ಭಾಷೆ ಎಂದರು. ನಮ್ಮ ಡೆಲ್ಲಿಯಲ್ಲೇ ಕನ್ನಡ ಎಂದರೆ ಏನು? ಎಂದು ಮಾಸ್ತಿಯವರನ್ನು ಕೇಳಿದ್ದು ಉಂಟಂತೆ. ಲಂಡನ್ನಿನಲ್ಲಿ ಹಾಗಂದರೇನಾಶ್ಚರ್ಯ?

"ಮಹನೀಯರೇ—ಹೆಸರಿಗೆ ಹೈಡ್‌ಪಾರ್ಕು—ಇಲ್ಲಿ ಏನು ಮುಚ್ಚುಮರೆ ಇದೆ—ಹೀಗೆ ತರುಣ ತರುಣಿಯರು ತುಟಿಗೆ ತುಟಿ ಹಚ್ಚಿ ಘಂಟೆಗಟ್ಟಲೇ ಕೂತರೆ ಮುಚ್ಚು ಮರೆ ಎಲ್ಲಿದೆ?—ಈ ಹೆಸರು ಈ ಪಾರ್ಕಿಗೆ ತಕ್ಕುದಲ್ಲ ಎಂದು ಘಂಟಾ ಘೋಷವಾಗಿ ಸಾರುತ್ತೇನೆ. ಕಡೆಯದಾಗಿ ನನ್ನ ಕನ್ನಡದಲ್ಲಿ ಭಾಷಿಸಲು ಈ ಸೋಪ್ ಬಾಕ್ಸ್ ಭಾಷಣ ವೇದಿಕೆಯಲ್ಲಿ ಅವಕಾಶ ಕೊಟ್ಟದ್ದಕ್ಕೆ ಲಂಡನ್ನಿನ ಮೇಯರಿಗೆ—ನಮ್ಮ ಮಠದ ಪರವಾಗಿ ಅಭಿವಂದನೆ."

—ಎಂದು ಕೆಳಗಿಳಿದುಬಂದ. ಚಪ್ಪಾಳೆ ಎಲ್ಲರೂ ಹೊಡೆದರು. ಆದರೆ ಗುರುಗಳು—ಇತರ ಶಿಷ್ಯರೂ ಇವನ ತಲೆಯಮೇಲೆ ಹೊಡೆದರು. ನೋಡಿದಿರಾ —ಇದು ಒಂದು ಸಂಜೆಯ ಅನುಭವ. ಇನ್ನೂ ಬಹಳ ಇದೆ—ಗುರುಗಳ ಸಂಚಾರ ಮುಗಿದ ಮೇಲೆ ಪಗಡದಸ್ತಾಗಿ ಬರೆದು ಕಳಿಸುವೆ. ವಿಶ್ವಾಸವಿರಲಿ—ಓದುಗರಿಗೆ ನನ್ನ ಅಭಿನಂದನೆಗಳು.

ಇತಿ ತಮ್ಮವ

ದಾಶರಥಿದೀಕ್ಷಿತ್



ಇದೇನೂ ಅಂದ್ರೆ! ಮರೆತು ನಮ್ಮನೆಗೇ ಭಿಕ್ಷಕ್ಕೆ ಬಂದಿಬಿಟ್ಟದ್ದೀರಿ?

ಇನ್ನೊಂದು ಕನಸು

ಉಂಡು ಮಲಗಿದ ಮೇಲೆ
ಕಂಡೆ ಕನಸೊಂದನ್ನ
ಊಟಿ ಗುಡ್ಡದ ಮೇಲೆ
ತುಂಬಿದ ಕೆರೆಯೊಂದನ್ನ

ಗುಡ್ಡದ ಮೇಲಕ್ಹತಿ
ಕೆರೇನ್ ನೋಡ್ತಾ ಬಂದೆ
ಪಂಡಿತರನ್ನ ಕೂಗಿ
"ಕೆರೆ ಇದೇನು? ಎಂದೆ

ಕಣ್ಣೀರಿಂದು ಕೆರೆ
ಅಂತ ಪಂಡಿತರಂದ್ರೆ
ಯಾಕೆ ಕಣ್ಣೀರ್‌ಕೆರೆ
ಅಂತ ತಿಳಿದೇ ತೊಂದ್ರೆ

ದೇವರ ಕಣ್ಣೀರ್ ಕೆರೆ
ಅಂತ ಪಂಡಿತರಂದ್ರು
ಯಾತಕ್ ಕಣ್ಣೀರಪ್ಪೋ?
ಅದಕ್ಕವರಂದ್ರು—

"ದೇವರಿಗೂ ನಾ ಹೆದರಾಕಿಲ್ಲ ಅಂತ ಅಂದ್ಬಿಟ್ಟೆ
ದೇವ್ರು ಕಣ್ಣೀರ್ ಸುರಿಸೋಕ್ ತೊಡಗಿ ಆಯ್ತು ಕೆರೆ ಕಟ್ಟೆ"

ಊಟಿ ಗುಡ್ಡದ ಮೇಲೆ
ಕಣ್ಣೀರ್ ಕೆರೆ ಕನಸು
ಅಯ್! ದೇವ್ರಿಗೂ ಎದರಾಕಿಲ್ಲ
ಪಂಡಿತರ ಮನಸು!

—ರಾಮಿ

ತದನಂತರ

———.

ಎಲ್ಲಕ್ಕೂ ಒಂದು ಎಲ್ಲೆಯಿದೆ. ಅದನ್ನು ಗಮನಿಸಿ ನಾವು ಅ. ಕ. ವಿ. ಪ್ರೇ. ಪ. ಮಾಲೆಯನ್ನು ನಿಲ್ಲಿಸಿದ್ದೇವೆ. ಅದನ್ನು ನಿಲ್ಲಿಸಲು ಅಥವಾ ಮುಂದುವರಿಸಲು ಯಾರೂ ಪುಸಲಾಯಿಸಲಿಲ್ಲ. ಆದುದರಿಂದ ಈಗ ಪ್ರತಿಭಟನೆಯಾಗಲೀ, ಸಂತೋಷ ಸೂಚನೆಯಾಗಲೀ ಆಗುವುದೆಂದು ನಾವು ನಿರೀಕ್ಷಿಸುವುದಿಲ್ಲ.

ಈ ಮಾಲೆಯ, ಕಥಾನಾಯಕ ನಾಯಕಿಯರೊಬ್ಬರಿಗೂ ಪ್ರಸ್ತುತ ಇತಿಹಾಸ ಕರ್ತನ ಮೇಲೆ ದ್ವೇಷ ಹುಟ್ಟಿಲ್ಲವೆಂಬ ಒಂದು ಆಶ್ಚರ್ಯಕರ ಸಂಗತಿಯನ್ನು ಹೊರ ಗೆಡಹಬೇಕಾಗಿದೆ. ಆದರೆ ಕುಂಬಳಕಾಯಿ ಕಳ್ಳರನೇಕರು ಹೆಗಲು ಮುಟ್ಟಿ ನೋಡಿ ಕೊಂಡ ಪ್ರಸಂಗಗಳು ವರದಿಯಾಗಿವೆ.

ಈ ಲೇಖನ ಮಾಲೆಯನ್ನು ಕೂಡಲೇ ನಿಲ್ಲಿಸಬೇಕೆಂಬ ಅಮೂಲ್ಯ ಸೂಚನೆ ಯನ್ನಿತ್ತಿದ್ದ ಸ್ನೇಹಿತರೊಬ್ಬರನ್ನು ಇತ್ತೀಚೆಗೆ ನಾನು ಭೆಟ್ಟಿಯಾಗಿದ್ದೆ. "ಎಲೋ, ಈ ದುರಪವಾದ ಗೋಷ್ಠೀ ಪ್ರಸಂಗಗಳನ್ನು ಬರೆಯುವುದಕ್ಕೇಕೆ ಆರಂಭಿಸಿದೆ" ಎಂದವರು ಕೇಳಿದರು. ಆಶ್ಚರ್ಯದ ಸಂಗತಿಯೆಂದರೆ ಅ. ಕ. ವಿ. ಪ್ರೇ. ಪದ ಸೃಷ್ಟಿಗೆ ಕಾರಣವಾದ ಸೂಚನೆಗಳಲ್ಲೊಂದನ್ನು ನನ್ನೆದುರಿಗಿಟ್ಟವರು ಅವರೇ. ಆ ಸ್ನೇಹಿತರು ಈಗಾಗಲೇ ಅ. ಕ. ವಿ. ಪ್ರೇ. ಪ. ಮಾಲೆಯ ಓದುಗರಿಗೆ (ಅಂತವರು ಯಾರಾದರೂ ಇದ್ದರೆ!) ಅಮಾತ್ಯರಾಕ್ಷಸನೆಂಬ ಹೆಸರಿನಿಂದ ಪರಿಚಿತರಾಗಿದ್ದಾರೆ.

ಹೀಗೆಲ್ಲಾ ಸಂಬಂಧವಿಲ್ಲದ ವಿಪ್ರಲಾಪ ಮಾಡಲೆಂಬ ಉದ್ದೇಶದಿಂದ ಈ ಲೇಖನ ಬರೆಯುತ್ತಿಲ್ಲ. ಆದರೂ ಈ ಲೇಖನ ಮಾಲೆಯನ್ನು ಕೊನೆಗೊಳಿಸಿದ್ದಕ್ಕಾಗಿ, ಇನ್ನಾರಿಗೂ ಇಲ್ಲದಿದ್ದರೂ, ನಮಗೆ ತುಂಬಾ ದುಃಖವಾಗುತ್ತಿದೆ. ನಮ್ಮ ಹತ್ತಾರು ಕತೆಗಳ ನಾಯಕ ನಾಯಕಿಯರು ನಮ್ಮ ಕಣ್ಣೆದುರಿಗೆ ಸುಳಿದಾಗ, ಕರುಳು ಕಿತ್ತು ಬಂದಹಾಗಾಗಿ ಕಣ್ಣೀರು ಸುರಿಯುತ್ತದೆ.

ಪ್ರೇಮದ ವಿಷಯವೇ ಹಾಗೆ! ಅದು ಲೋಕವೆಲ್ಲಾ ಹೊಲೆಗೆಡಿಸಿಕೊಂಡಿರುವ ಶಬ್ದವಾದರೂ, ಲೋಕಕ್ಕೆ ನಿಲುಕದ ತತ್ವವೇ ಆಗಿ ಉಳಿದಿದೆ. ವಿಫಲವಾದ ಪ್ರೇಮ? ಕಳೆದು ಹೋದ ಪ್ರೇಮ?

ಅದನ್ನು ಮತ್ತೆ ಪಡೆಯುವ ಬಗೆ ಯಾವುದು? ಮಾತಿನಿಂದ, ಚಿಂತೆಯಿಂದ, ದ್ರಾವಿಡ ಪ್ರಾಣಾಯಾಮದಿಂದ ಅದನ್ನು ಪಡೆಯುವುದು ದುಸ್ಸಾಧ್ಯ.

'For that you had to move mountains' ಎಂದಿದ್ದಾರೆ. ಪ್ಯಾಸ್ಟರ್‌ನ್ಯಾಕ್.

ಅದರಿಂದಲೂ ಸಾಧ್ಯವಿಲ್ಲ ಎಂಬುದೇ ತಂತಿಯ ಅನುಭವ. ವಸಂತಾಗಮನ ದಂದು ನಡೆದ ಅ. ಕ. ವಿ. ಪ್ರೇ.ಪದ ವಾರ್ಷಿಕಾಧಿವೇಶನದಲ್ಲಿ ತಂತಿಯ ಅನುಭವ ಕಥನ ನಡೆದಾಗ ನೀವು ಇದ್ದಿದ್ದರೆ ಅಥವಾ ಕೊರವಂಜಿಯ ಮೇ ಸಂಚಿಕೆಯನ್ನೋದಿ ದ್ದರೆ ಅವನ ಕಥೆ ನಿಮಗೆ ತಿಳಿದಿದೆ. ಒಂದು ಪಕ್ಷ ತಿಳಿಯದಿದ್ದರೂ ಚಿಂತೆಯಿಲ್ಲ.

ತಂತಿ ಪ್ರೇಮ ಸಂಪಾದನೆಗಾಗಿ ಪರ್ವತಗಳನ್ನೇ ಸರಿಸಿದ್ದ. ಆದರೂ ಅದು ಸಾಧ್ಯವಾಗದೆ ಅವನು ತನ್ನ ಮನಃಪ್ರಿಯೆಯ ಅಣ್ಣ, ಅವಳ ಮನೆಯ ಆಳು ಮತ್ತು ತಾತ್ಯಾಟೋಪಿ ಇವರ ಕೈಯಿಂದ ತೌಡು ಹರಿಯುವಂತಹ ಏಟುಗಳನ್ನು ತಿಂದಿದ್ದ

ಅದು ಪ್ರೇಮವೇ ಅಲ್ಲವೆಂದು ತಂತಿ ಹೇಳುತ್ತಿದಾನೆ ಈಗ. ಏಕೆಂದರೆ ಇದೀಗ ಅವನಿಗೆ ಪ್ರೇಮದ ನಿಜವಾದ ಸ್ವರೂಪ ತಿಳಿದಿದೆಯೆಂದು ಅವನು ಹೇಳಿದ. ಅವನಿಗೆ ಪ್ರೇಮದ ಸ್ವರೂಪದರ್ಶನವಾಗಲು ಸಾರ್ವಜನಿಕ ದುರಪವಾದ ಗೋಷ್ಠಿಯೇ ಕಾರಣ.

ತಂತಿಯ ಸ್ವಪ್ನಸುಂದರಿಯನ್ನು ನೀವು ನೋಡಿದೀರಾ? ಇಲ್ಲವಲ್ಲವೇ? ನಾನು ನೋಡಿದೇನೆ. (ಮುಗಿಲು ಹಳ್ಳಿಯಲ್ಲಿ ನಾಲ್ಕು ಹೆಜ್ಜೆಯಿಟ್ಟರೆ ಸಾಕು ನೀವು ಎಡವಿಬೀಳುತ್ತೀರಿ. ಹಾಗೆ ಎಡವಿದುದು ಅ. ಕ. ವಿ. ಪ್ರೇ. ಪದ ನಾಯಕ ನಾಯಕಿಯರುಗಳನ್ನು ಎಂದೇ ತಿಳಿಯಿರಿ) ಮೊನ್ನೆ ಬಕ್ಕೇಶಿಯ ಮದುವೆಗೆ ನಾನು ಹೋದಾಗ, ನನ್ನಂತೆಯೇ ಆಹ್ವಾನಿತರಾಗಿ ಅಲ್ಲಿಗೆ ಬಂದಿದ್ದ ಕಾಲೇಜು ಮೇಷ್ಟ್ರು ರೊಬ್ಬರು "ಅ. ರಾ. ಸೆ. ಅವಳನ್ನು ನೋಡಿ. ಅವಳ ಬಗೆಗೆ ಒಂದು ಕತೆ ಬರೆಯ ಬಹುದು" ಎಂದರು. ಅದೇನು ಎಂದು ಕೇಳಿದೆ. ಅವರು ಹೇಳಿದರು, ನಾನು "ಗುರುಗಳೇ ನನ ಕ್ಷ ಕಿರಣದ ಕಣ್ಣಿಗೆ ಗೋಚರವಾಗದುದು ಯಾವುದೂ ಇಲ್ಲ. ಅವಳ ಕತೆಯನ್ನಲ್ಲದಿದ್ದರೂ ತಂತಿಯ ಕತೆ ಬರೆದಿದೇನೆ" ಎಂದೆ.

ಆದಿನ ಸಂಜೆ ಸ್ವಪ್ನಸುಂದರೀ ರಸ್ತೆಯ ಕಡೆ ಹೋಗುತ್ತಿದ್ದಾಗ ಸಾದು ಗೋಷ್ಠಿಯ ಫುಟ್‌ಪಾತ್‌ಸೆಷನ್ ನಡೆಯುತ್ತಿತ್ತು. ಅವರ ಪ್ರಚಾರ ಹೀಗೆ ನಡೆದಿತ್ತು.

"ಅವಳು ಓಡಿಹೋಗಿ ಆಗಲೇ ಎಂಟು ದಿನವಂತೆ" ಎನ್ನುತ್ತಿದ್ದ ಒಬ್ಬ ಮಧ್ಯ ವಯಸ್ಕ.

" ಯಾರ ಜೊತೆಗೋ ?" ಇನ್ನೊಬ್ಬ ಕೇಳಿದ.

" ಅವನೇ, ಆ ಗಡ್ಡ ಬಿಟ್ಟಿರಲಿಲ್ಲವೇ ಆ ತಂತಿ ಅವನ ಜೊತೆ"

" ದೊಡ್ಡ ಮನುಷ್ಯರ ಮಗಳು. ಏನು ಮಾಡಿದರೂ ನಡೆಯುತ್ತದೆ" ಎಂದು ಒಬ್ಬ ಕೊಂಕು ನುಡಿದ.

" ಅಲ್ಲ ಲೇ, ಬೆಣ್ಣೆ ನುಂಗಕ್ಕೆ ಬರಲ್ಲೇನೋ ಅನ್ನ ಹಂಗೆ ಮಿಣ್ಣಗಿದ್ಳು. ಎಂಥ ಹಲ್ಕಟ್ ಜನ. ಈ ಜಾತಿ ನಂಬಭೌದೇನೋ?" ಚೌಕೀಪೇಟೆಯವನೊಬ್ಬ ಕೇಳಿದ,

" ತಮಾ, ಯಾರನ್ನಂಬಿದ್ರೂ ನಂಬು, ಹೆಂಗ್ಸನ್ನಂಬ್ಯಾಡ" ಒಬ್ಬ ಬುದ್ಧಿವಾದ ಹೇಳಿದ.

" ಅಪ್ಪನಿಗೆ ತಕ್ಕಮಗ್ಳು. ಕಂಡರ‍್ಗಂಟು ಹೊಡ್ಯೋನಿಗೆ ಮಾನತಗ್ಯಕ್ಕೆ ಅನ್ನ ಮಗಳೇ ಸರಿ!"

ನನ್ನ ಕಿವಿಗೆ ಜ್ವರವೇರಿತ್ತು. ಅತ್ಯಂತ ಕುತೂಹಲಾಯುಕ್ತನಾದ ನಾನು ನನ್ನ ಮಿತ್ರ ಗಾಡಿ ಬಸ್ಸನ ಹತ್ತಿರಕ್ಕೆ ನೇರವಾಗಿ ಹೋದೆ.

" ಏನೋ ರಾಯ ಬಂದೆ?" ಎಂದು ಕೇಳಿದ ಬಸ್ಯ. " ಅಲ್ಲೋ ಬಸ್ಯ, ತಂತಿ ಜೊತೆಗೆ ಓಡಿ ಹೋದಳಂತಲ್ಲೇನೋ ಆ ಕಲ್ಲಾಪಿಲ್ಲಿ?"

" ಐ ನಿಂಗೊತ್ತಿಲ್ಲೇನು. ಓಡ್ಹೋಗಿರದ್ನಿಜ. ತಂತಿ ಜತೆಗಲ್ಲ ಆ ವಾಡೇದರ ಹುಡುಗನ ಜೊತೆಗೆ. ಓಡ್ಹೋಗಿ ಹದಿನೈದು ದಿನಾತು. ಬಿಲ್ಲಾರ ಬೆಳೆದ್ಹುಡಿಗೇರ‍್ನ ಕಾಲೇಜಿಗೆ ಕಳಿಸಿ, ಅವ್ರಷ್ಟಕ್ಕವ್ರನ್ನ ಇಟ್ಕೆ ಬಂಥಂಗೆ ಮೆರೆಯಕ್ಕೆ ಬಿಟ್ರೆ ಹುಚ್ಚೆದ್ದು ಕುಣೀದಾ ಬಿಡ್ತರೇನೋ ?"

" ಯಾರು ಹೇಳಿದ್ರೋ ನಿನಗೆ?"

" ಅವರ ಮಗ್ಳು ಮನೇರು ನಮ್ಮ ಈರಭದ್ರೀಗೆ ಹೇಳಿದರಂತೆ. ಅವನು ನಂಗೆ ಹೇಳಿದ"

ಅವನನ್ನು ಬಿಟ್ಟು ಒಂದು ಫರ್ಲಾಂಗ್ ಹೋಗುವಷ್ಟರಲ್ಲಿ ವಾಡೇದ ಕಂಬಸ್ಯ ಸಿಕ್ಕ.

" ಬಾರಾಯಾ, ಭಾಳದಿನಕ್ಕೇ ಸಿಕ್ಕೆಲ್ಲಾ " ಎನ್ನುತ್ತಾ ಬೆನ್ನ ಮೇಲೆ ಗುದ್ದಿ ಒಂದು ಬೀಡಿ ಕೊಟ್ಟು

" ಅಲ್ಲೋ ಆ ಕಲ್ಲಾಪಿಲ್ಲಿ ಓಡಿ ಹೋದಳಂತೆ ತಂತಿ ಜೊತೆಗೆ. ಈರಭದ್ರಿ ಹೇಳಿದ. "

"ಇರಬೌದಯ್ಯ. ಕಲ್ಲಾಪಿಲ್ಲಿ ಸುದ್ದಿ ಕಟ್ಗೆಂಡು ನನಗೇನು?" ಎಂದೆ. ವಾಡೇದ ಕರಿಬಸ್ಸನನ್ನು ತೊಲಗಿಸಿ ಎಂಟುಹತ್ತು ಹೆಜ್ಜೆ ಇಟ್ಟಿಲ್ಲ; ಆಗಲೇ ಪುಡಿ ಚಿಲ್ರೆ ಸಿಕ್ಕ.

"ಏನ್ಸಾರ್ ನಿಮ್ಮ ಕಥಾನಾಯಕಿ ಪಲಾಯನ ಮಾಡಿದಾಳಂತೆ" ಎಂದ.

"ಇರಬಹುದಪ್ಪಾ. ಯಾರು ಹೇಳಿದರು?"

"ಅವಳ ಸಮೀಪದ ಅಧಿಕೃತ ವಲಯಗಳ ನಂಬಿಕೆಗೆ ಅರ್ಹವಾದ ವಾರ್ತಾ ಮೂಲಗಳು ನನಗೆ ಹೇಳಿದವು ಸರ್, ನಿಜವೇ?"

"ನನಗೇನು ಗೊತ್ತಯ್ಯ. ಇದ್ದರೂ ಇರಬಹುದು. ಆದರೆ ಈ ದಿನ ಬೆಳಗ್ಗೆ ಅವಳನ್ನು ನೋಡಿದ್ದು ನಿಜ."

"ಸುಳ್ಳು ಸಾರ್, ನೀವು ಇನ್ನು ಯಾರನ್ನು ನೋಡಿದಿರೋ ಏನೋ?"

"ಇದ್ದೀತಪ್ಪ. ನನ್ನ ಕಣ್ಣು ಕೊಂಚ ಸುಮಾರು ಟೆಸ್ಟ್ ಮಾಡಿಸಲು ಬಿಡುವೇ ಇಲ್ಲ."

ಪುಡಿ ಚಿಲ್ರೆಯನ್ನು ಹಿಂದಿಟ್ಟು ನಾನು ಒಂದು ನೂರುಗಜ ನಡೆದಿರಬಹುದು. ಯಾರೋ ಕೈತಟ್ಟಿದರು. ಹಿಂದಿರುಗಿ ನೋಡಿದೆ. ತಂತಿ ಓಡಿಬರುತ್ತಿದ್ದ. ನಿಂತೆ.

ತಂತಿ ಏಗುತ್ತಾ ಬಂದು "ಸರ್, ಅರಾಸೇ ಎಂದರೆ ನೀವೇ" ಎಂದ.

"ಹೌದು. ನಾನು ಹಾಗೆಂದುಕೊಳ್ಳುವುದುಂಟು"

"ಸರ್! ಏನು ಬರೆಯುತ್ತೀರಿ ಸರ್! ನನ್ನ ಕತೆ most wonderful ಸರ್. ಆದರೆ ತಾತ್ಯಾಟೋಪಿ ನನ್ನ ಹಲ್ಲು ಮುರಿದ ಎಂದು ಬರೆದಿದ್ದೀರಿ. ಅದು ಸುಳ್ಳು. ಅವನು ಬರೀ ಬೂಟುಗಾಲಿನಲ್ಲಿ ಝಾಡಿಸಿದ ಅಷ್ಟೇ. ಅಲ್ಲದೆ ನೀವು ಬರೆದಿದೀರಲ್ಲಾ ಅಷ್ಟು ಚೆನ್ನಾಗಿ ನಾನು ಕಾಗದ ಬರೆಯಲಿಲ್ಲ."

"ಅಲ್ಲವಯ್ಯಾ ನೀನು........"

"ನಿಲ್ಲಿ ಸರ್! ಸುಳ್ಳು ಸರ್! ಅನ್ಯಾಯ ಸರ್! ಅಸಂಬದ್ಧ ಸರ್! ಆ ಈರ್ಭದ್ರಿ ಚರ್ಮನ ನಾನ್ಸುಲಿದಿದ್ರೆ ಯಾಕ್ಸಾರ್? ಶುದ್ಧ ಬೇಕೂಫ ಸರ್! ಅವಳು ತುಂಬಾ ಒಳ್ಳೇಳು ಸರ್! ಅವಳ ಮೇಲೆ ಆಗ ನಿಜವಾದ ಪ್ರೇಮ

ಬೆಳೆದಿರಲಿಲ್ಲ ಸರ್. ಕಾಲೇಜು ಬಿಟ್ಟು, ತಂದೆ ತಾಯಿಗಳನ್ನು ಬಿಟ್ಟು, ಅವಳಿಗಾಗಿ ಕೆಟ್ಟ ಹೆಸರು ಹೊತ್ತು, ಅನಾಮಧೇಯನಾಗಿ ಅನೇಕ ಕಾಲ ಅಜ್ಞಾತವಾಗಿದ್ದರೂ, ಆಗ ನನ್ನಲ್ಲಿದ್ದುದು ಮೋಹ ಸಾರ್, ಪ್ರೇಮವಲ್ಲ.

ಈಗ ಈ ತಿರುಚು ನಾಲಗೆಗೆ ಸಿಕ್ಕಿ ಅವಳು ಅಸಹಾಯಳಾಗಿ ದುರ್ನಾಮ ಹೊತ್ತಿರುವ ನಾನು, ಅವಳನ್ನು ನಿಜವಾಗಿ ಪ್ರೀತಿಸಲಾರಂಭಿಸಿದೇನೆ ಸರ್. ಇನ್ನು ಮೇಲೆ ಅವಳ ತಂಟೆಗೆ ಹೋಗೋದಿಲ್ಲ.

ಅದರ ಬದಲು, ನಾಳೆ ಬೆಳಗ್ಗೆ ಸೂರ್ಯ ಹುಟ್ಟುವುದರಲ್ಲೇ ಈರಭದ್ರಿಯ ಗಾಬು ಜಿಗಿದು ಊರಿನ ಕರುವಗಲ್ಲಿನ ಬಳಿ ತೋರಣ ಕಟ್ಟದಿದ್ದರೆ ನಾನು ತಂತಿಯೇ ಅಲ್ಲ ಸರ್ !"

ಅತ್ಯಂತ ವಿಹ್ವಲನಾದ ನಾನು ಕಂಬನಿಗಳನ್ನು ಸುರಿಸುತ್ತಾ ತಂತಿಯನ್ನು ಬೀಳ್ಕೊಟ್ಟು, ಮುಂಬರಿದೆ. ನೂರು ಹೆಜ್ಜೆ ಇಡುವಷ್ಟರಲೇ ಈರಭದ್ರಿ ಸಿಕ್ಕಿದ.

"ಈರ್ಭದ್ರೀ, ಎಲ್ಲಾ ಬಿಟ್ಟು ಕಲ್ಲಾಪಿಲ್ಲಿಗೇಕೆ ಕೆಟ್ಟಹೆಸರು ಹೊರಿಸಿದೆ. ಪಾಪ ತಂತಿಯಾಗಲೀ, ವಾಡೇದ ಕರಿಬಸ್ಯನಾಗಲೀ, ಅವಳ ಹೈಹೀಲ್ ಷೂಸಿನ ಪಾಲೀಷ್ ಸಹಾ ಮುಟ್ಟಿಲ್ಲ" ಎಂದೆ.

"ಏನ್ರಾಯಾ ?"

"ಅವಳೋಡಿಹೋದಳು ಅಂತ ಯಾಕೆ ನೀನು ಬ್ರಾಡ್‌ಕಾಸ್ಟ್ ಮಾಡ್ತಾ ಇದೀ ?"

"ಯಾರು ? ಕಲ್ಲಾಪಿಲ್ಲಿ ಓಡಿಹೋದಳೇ, ಅನ್ಯಾಯ ಅನ್ಯಾಯ, ಚಿನ್ನದಂಥ ಹುಡುಗಿ. ಅವಳು ಓಡಿಹೋದ ಸುದ್ದಿ ಯಾರಿಗೂ ಹೇಳ್ಬ್ಯಾಡ. ಯಾವತ್ತೋಡ್ಹೋದಳಂತೆ ?"

"ಲೋ ರ್ಯಾಸ್ಕಲ್, ನೀನೇ ಸುದ್ದಿಹಬ್ಸಿ, ಈಗ......."

"ಒಕ್ಕೇಶನ ಆಣೆಗೂ ಇಲ್ರಾಯ. ನನ್ನ ಮಕ್ಕಳ ದೇಖ್ರೇಕೆ ನೋಡ್ಕೆಂಬಕ್ಕೇ ನನಗೆ ಪುರ್ಸತ್ತಿಲ್ಲ. ಕಂಡರ್ಮನೆ ಹೆಣ್ಮಕ್ಳ ಸುದ್ದಿ ನನ್ಗ್ಯಾಕೆ ? ಪ್ರಮಾಣ್ಸತ್ಯ ಇಲ್ಲ ಪೋರಾಯ, ನೀನ್ಹೇಳ್ದಾಗೇ ನಂಗ್ತಿಳ್ದಿದ್ದು" ಎಂದ ಈರಭದ್ರಿ.

—ಅ. ರಾ. ಸೇ.

ಸರಿಯಾಗಿ ನೋಡಬೇಕು !

ವೆಂಕಟೇಗೌಡರು ಕಚೇರಿಯಿಂದ ಮನೆಗೆ ಸಂಜೆ ಬಂದು ವರಾಂಡಾದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾಗ ಅಡಿಗೆಯವನು ಉಪ್ಪಿಟ್ಟು ಬೋಂಡಾ ಕಾಫಿ ತಂದಿಟ್ಟಿದ್ದ. ಕಚೇರಿಯ ನೌಕರ ಕಾಲು ಒತ್ತುತ್ತಿದ್ದ. ಮಡದಿ ಕಸೂತಿ ಹಾಕುತ್ತಾ ಸುದ್ದಿ ಹೇಳುತ್ತಿದ್ದಳು. ರಸ್ತೆಯಲ್ಲಿ ಡೀಸಲ್ ಲಾರಿಯೊಂದು ರಭಸದಿಂದ ಹೋಯಿತು. ಹೊಗೆ ಹರಡಿತು ಗೌಡರ ಎಡಗಣ್ಣು ಉರಿಯು ಹತ್ತಿತು. ಎಡಗೈಯಲ್ಲಿ ಬೋಂಡಾ ಹಿಡಿದುಕೊಂಡು ಬಲಗೈಯಲ್ಲಿ ಎಡಗಣ್ಣನ್ನು ತಿಕ್ಕಿದರು. ಕಣ್ಣು ಕೆಂಪಾಯ್ತು, ಉರಿಯಾಯ್ತು. ಮಡದಿ ಎದ್ದು ಬಂದು ಹತ್ತಿರ ನಿಂತು ಕಣ್ಣು ತಿಕ್ಕಬಾರದು. ನೀರಿನಲ್ಲಿ ತೊಳೆದು ಕಾಡಿಗೆ ಹಚ್ಚಿದರೆ ತಂಪಾಗುತ್ತೆ ಎಂದು ಹಾಗೆ ಮಾಡಿದಳು. ಕಣ್ಣು ಕೆಂಪು ಹೆಚ್ಚಾಯ್ತು. ಉರಿ ಹೆಚ್ಚಾಯ್ತು, ಕಣ್ಣು ಹೊಟ್ಟೆ ಊದಿಕೊಂಡಿತು.

ಮಡದಿ ಗಂಡನ ಕಣ್ಣು ನೋಡಿ ಅತ್ತಳು. ಡಾಕ್ಟರನ್ನು ಕರೆಸುತ್ತೇನೆ ಅಂದಳು. ಹೀಗಿದ್ದರೆ ನಿಮ್ಮ ಕಣ್ಣು, ನಾಡಿದ್ದು ಬೆಳಿಗ್ಗೆ ಮುಖ್ಯ ಸಚಿವರು ಬಂದಾಗ ಹೇಗೆ ಎದುರ್ಗೊಳ್ಳೋದು ನಾವು ಅಂದಳು.

ಗೌಡರ ಕಣ್ಣಿನ ಉರಿ ಮೈಕೈಗೆಲ್ಲಾ ಹರಡಿತು. ಮುಖ್ಯ ಸಚಿವರ ಹೆಸರು ಹೇಳಿದಾಗ ನಖಶಿಖಾಂತ ಉರಿ ಹರಡಿತ್ತು. ತಾವೇ ಮುಖ್ಯ ಸಚಿವರಾಗಬೇಕಾಗಿದ್ದಾಗ, ಕುಲಗುರುವಿನ ಆಶೀರ್ವಾದದಿಂದ ಆತ ಮುಖ್ಯ ಸಚಿವನಾದ. ತಾನು ಉಪಸಚಿವನಾಗಬೇಕಾಯ್ತು. ಹಾಗಿದ್ದಾಗ ಕೈ ಹಿಡಿದ ಮಡದಿ ಅವನಿಗೋಸ್ಕರ ಡಾಕ್ಟರನ್ನು ಕರೆಸುತ್ತೇನೆ ಅಂದಳಲ್ಲಾ ಅಂತ ಉರಿ ಹೆಚ್ಚಿತ್ತು. ಆದರೆ ಹಿನ್ನೆಲೆಯಲ್ಲೇ ಅವಳನ್ನು ಮದುವೆಯಾಗದಿದ್ದರೆ ಈ ಪದವಿ ಕೂಡಾ ಸಿಗುತ್ತಿತ್ತಿಲ್ಲ ಎಂದೂ ತಿಳಿದಿತ್ತು.

ಡಾಕ್ಟರು ಬಂದರು, ಯಾವ ಡಾಕ್ಟರು ಅಂತೀರಿ! ಮುಖ್ಯ ಡಾಕ್ಟರು ಮುಖ್ಯ ಸಚಿವರ ಕೊಟೇಯ ಮನೆಗೆ ಹೋಗಿದ್ದರು. ಎರಡನೇ ಡಾಕ್ಟರು ಮುಖ್ಯ ಸಚಿವರ ಮೋಟಾರ್ ಡ್ರೈವರಿನ ಮನೆಗೆ ಹೋಗಿದ್ದರು. ಮೂರನೆಯ ಡಾಕ್ಟರು ಮೊದಲ ಸಚಿವರ ಮನೆಯ ಮುಸುರೆ ತಿಕ್ಕುವಳ ಕೈಗೆ ಮುಲಾಮು ಹಚ್ಚಲು ಹೋಗಿದ್ದರು. ಹೀಗೇ ಆಗಿ ಕಡೆಗೆ ಖಾಸಗೀ ಡಾಕ್ಟರು ಬಂದರು.

ಖಾಸಗೀ ಡಾಕ್ಟರು ಉಪಸಚಿವರಿಗೆ ನಮಸ್ತೆ ಅಂದರು. ಉಪ ಸಚಿವರ ಮಡದಿ "ಧನ್ಯವಾದ" ಅಂತ ಉತ್ತರಿಸಿದರು. ಉಪ ಸಚಿವರಂದರು "ಡಾಕ್ಟರೇ ಎಡಗಣ್ಣು ಉರಿಯುತ್ತೆ. ಬೇನೆ ಬಂದಿದೆ. ನೋಡಿ ಬೇಗ ನಾಳೆಗೆ ಸರಿಹೋಗಬೇಕು" ಎಂದು.

ಖಾಸಗೀ ಡಾಕ್ಟರು ದಫ್ತರವೊಂದನ್ನು ತೆಗೆದರು. ನಿಮ್ಮ ಹೆಸರೇನು ಎಂದರು. ಹೇಳಿದ ಹೆಸರು ಬರೆದುಕೊಂಡು ನಿಮ್ಮ ವಯಸ್ಸೇನು, ನಿಮಗೆ ಎಷ್ಟು

ಜನ ಹೆಂಡಿರು, ಯಾವ ಯಾವಾಗ ಮದುವೆಯಾದ್ದು, ಎಷ್ಟು ಜನ ಮಕ್ಕಳು, ಯಾವಾಗ ಯಾವಾಗ ಎಲ್ಲಿ ಹುಟ್ಟಿದರು, ಎಷ್ಟು ಜತೆ ಚಪ್ಪಲಿಗಳಿವೆ, ಎಲ್ಲೆಲ್ಲಿ ಕೊಂಡಿದ್ದು, ಅವಕ್ಕೆ ಯಾರು ಬಣ್ಣ ಹಾಕುತ್ತಾರೆ, ಎಂದೆಲ್ಲಾ ಕೇಳಿ ತಮ್ಮ ದಫ್ತರದಲ್ಲಿ ಬರೆದುಕೊಂಡರು. ಉಪ ಸಚಿವರ ಸಹಿ ಹಾಕಿಸಿಕೊಂಡರು ಕೊನೆಯಲ್ಲಿ ಒಂಟಿಗಣ್ಣಿನಲ್ಲೇ ರೇಗುತ್ತಾ ಉಪಸಚಿವರು ರುಜು ಹಾಕಿದರು.

ಖಾಸಗಿ ಡಾಕ್ಟರು ಅನಂತರ ಪುಸ್ತಕ ಮುಚ್ಚಿಟ್ಟು ಉಪಸಚಿವರ ಕಣ್ಣಿನ ಪರೀಕ್ಷೆಗೆ ತೊಡಗಿದರು. ಬೆಳಕು ಬಿಟ್ಟು ನೋಡಿದಾಗ ಉಪ ಸಚಿವರ ಕಣ್ಣಲ್ಲಿ ಕಪ್ಪಗೆ ಕಂಡ ಇದ್ದಿಲ ಚೂರನ್ನು, ತಮ್ಮ ಕರವಸ್ತ್ರದ ತುದಿಯಿಂದ ಪುಣಕ್ಕನೆ ಹೊರ ತೆಗೆದರು. ಮುಲಾಮು ಹಚ್ಚಿದರು.

"ಈಗ ಎಷ್ಟೋ ಹಿತವಾಗಿದೆ. ಉರಿ ನಿಂತಿದೆ. ಆದರೆ ಡಾಕ್ಟರೇ ಈ ಅರೆ ಕ್ಷಣದ ಚಿಕಿತ್ಸೆಗೆ, ನನ್ನ ಹೆಸರು ವಯಸ್ಸು, ಮಡದಿ ಮಕ್ಕರು ಇವರ ಪ್ರವರವೆಲ್ಲಾ ಏಕೆ ಕೇಳುತ್ತಾ ಒಂದು ಗಂಟೆ ವ್ಯರ್ಥಮಾಡಿದಿರಿ" ಎಂದು ಕೇಳಿದರು ಉಪಸಚಿವರು.

ಆಗ ಖಾಸಗಿ ಡಾಕ್ಟರು ಉತ್ತರಿಸಿದರು.

ದೊಡ್ಡ ಮಳೆ ಬಿದ್ದಾಗ ಮೂರು ತಿಂಗಳ ಹಿಂದೆ ಸರ್ಕಾರಿ ರಸ್ತೆಯಲ್ಲಿದ್ದ ತೆಂಗಿನ ಮರ "ನನ್ನ ದವಾಖಾನೆ ಎದುರಿಗೆ ಬಾಗಿಲ ಬಳಿ ಬಿತ್ತು. ದವಾಖಾನೆಗೆ ಬರಲು ಹೋಗಲು ಬಲು ಅಡಚಣೆಯಾಗಿತ್ತು. ನಾನು ತೆಗೆಸಹೋದಾಗ ಪೋಲೀಸಿನವರು ಇದು ಸರ್ಕಾರದ ಮರ. ಇದನ್ನು ಮುಟ್ಟಬೇಕಾದರೆ ಸರ್ಕಾರದ ಅಪ್ಪಣೆ ಬೇಕು ಅಂತ ನನ್ನ ತಡೆದರು ಅಪ್ಪಣೆ ಪಡೆಯಲು ಆಗ ನಾನು ಒಂದು ಅರ್ಜಿ ಹಾಕಿಕೊಂಡೆ ಇಲಾಖಾಧಿಕಾರಿಗಳು ಸಚಿವರ ಒಪ್ಪಿಗೆ ಬೇಕು ಎಂದರು. ಅವರಿಗೂ ಒಂದು ಅರ್ಜಿ ಕಳಿಸಿದೆ. ಅವರು ಉತ್ತರ ಬರೆಸಿದರು. ನಿಮ್ಮ ಅರ್ಜಿ ಕಾನೂನು ಪ್ರಕಾರ ಸರಿಯಾಗಿಲ್ಲ. ಈ ರೀತಿ ಮೂರು ಪ್ರತಿಗಳ ಅರ್ಜಿಯನ್ನು ಕಳಿಸಿ, ನಂತರ ವಿಚಾರಿಸಿ ತೀರ್ಮಾನಿಸಲಾಗುತ್ತೆ" ಎಂದು.

ಉತ್ತರ ತಂದ ನಾಲ್ಕನೆ ತರಗತಿಯ ನೌಕರ ತೆಂಗಿನಮರ ಎಡವಿಬಿದ್ದು ಹಲ್ಲು ಮುರಿದುಕೊಂಡು ದವಾಖಾನೆಗೆ ಅಳುತ್ತಾ ಬಂದ. ಅವನಿಗೆ ಚಿಕಿತ್ಸೆ ಮಾಡಿದೆ. ತಮ್ಮ ಸಹಿ ಇದ್ದ ಉತ್ತರವನ್ನು ಅವ ಕೊಟ್ಟು, ಹಿಂತಿರುಗಿ ಹೋಗುವಾಗ ದವಾಲಿಯ ಬಿಲ್ಲೆಯ ಶಕ್ತಿಯಿಂದ, ಹತ್ತಿರಿದ್ದ ಪೋಲೀಸಿನವರನ್ನು ಕರೆದು ಬಿದ್ದ ಮರವನ್ನು ಪಕ್ಕದ ಅಂಗಡಿಯ ಮುಂದೆ ಹಾಕಿದ.

ಆಗ ನಾನು ತೀರ್ಮಾನಿಸಿದೆ. ಸರಿಯಾಗಿ ಅಂದರೆ ಕಣ್ಣು ಮುಚ್ಚಿಕೊಂಡು ಕಾನೂನು ಪ್ರಕಾರ ಕೆಲಸ ಮಾಡಬೇಕು.

—ಪ್ರಸಾದ್

ಪತ್ರಾಧ್ಯಾಯ

—————.

ಗೃಹ ವಿಜ್ಞಾನ ಸಂಶೋಧನಾಲಯ

ಕೈಲಾಸಪಾಳ್ಯಂ ಬೆಂಗಳೂರು

ಶ್ರೀಮಾನ್ ರಟ್ಟೀ ಮಿಾಸೆ ಪುಟ್ಟೀ ಗೌಡರಿಗೆ

ನಾವು ಈ ಮೂಲಕ ತಿಳಿಸುವುದೇನೆಂದರೆ:—ನೀವು ತಯಾರಿಸುತ್ತಿರುವ "ಗೂಬೆ" ಗುರುತಿನ ಸೋಪನ್ನು ಉಪಯೋಗಿಸಿದಲ್ಲಿ ಬಟ್ಟೆಗಳು ಬಹಳ ಬೇಗ ಹಾಳಾಗುತ್ತಿರುವುದನ್ನು ನಾವು ಪ್ರತ್ಯಕ್ಷವಾಗಿಯೂ ಪ್ರಮಾಣವಾಗಿಯೂ ಕಂಡು ಹಿಡಿದಿದ್ದೇವೆ. ನಿಮ್ಮ ಸೋಪಿನ ತಯಾರಿಕೆಗೆ ಪೂರ್ತಿ ಕತ್ತೆ, ಕುದುರೆ, ಎತ್ತಿನ ಕೊಬ್ಬನ್ನು ಉಪಯೋಗಿಸುತ್ತಾ ಅಪ್ಪಟ ತೆಂಗಿನ ಎಣ್ಣೆಯನ್ನು ಉಪಯೋಗಿಸುತ್ತೇವೆಂದು ಪ್ರಕಟಿಸಿತ್ತುರುವುದು ನಾಚಿಕೆಗೇಡು. ನಿಮ್ಮ ಸೋಪನ್ನು ಉಪಯೋಗಿಸಿದಲ್ಲಿ ಬಿಳಿ ಬಟ್ಟೆಗಳು ಕಪ್ಪಗಾಗುವುದು ಸಾಮಾನ್ಯ ಮಾತಾಗಿದೆ ಮತ್ತು ನೊರೆಯಿಂದ ಬರುವ ದುರ್ವಾಸನೆಯಿಂದ ವಾತಾವರಣ ಕೆಡುತ್ತಿರುವುದು ನಗರ ಆರೋಗ್ಯ ಅಧಿಕಾರಿಗಳ ಗಮನಕ್ಕೆ ಹೋಗಿದೆ. ಅವರು ನಿಮ್ಮ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ.

ನಿಮ್ಮ " ತಿಗಣೆ " ಗುರುತಿನ ವ್ಯಾಸಾಬೂನನ್ನು ಉಪಯೋಗಿಸಿದರೆ ಮೈಯಲ್ಲಿ ದದ್ದುಗಳು ಗುಳ್ಳೆಗಳೇಳುತ್ತಿರುವುದನ್ನು ಕಂಡು ಜನತೆಯಲ್ಲಿ ಹಾಹಾಕಾರವೆದ್ದಿದೆ. ಇದರಿಂದ ಮುಲಾಮು ಕಂಪನಿಯವರಿಗೆ ಲಾಭವಾದರೂ ಜನತೆಗೆ ಅಪಾರ ಹಾನಿಯಾಗಿದೆ. ನಿಮ್ಮ ತಿಗಣೆ ಸೋಪನ್ನು ಮೆಚ್ಚುತ್ತಾರೆಂದು ಹೇಳುವ ನಾಟಕದ ನಟ ನಟಿಯರು ನಿಮ್ಮನ್ನು ಮಚ್ಚಿನಿಂದ ಕೊಚ್ಚಲು ಸಿದ್ಧವಾಗಿದ್ದಾರೆ.

ಜನಸೇವೆಯೇ ಜನಾರ್ಧನ ಸೇವೆಯೆಂದು ಅರಿತು ಆಚರಿಸುವ ನಮಗೆ ನಿಮ್ಮ ಮುಂಬರುವ ಅಧೋಗತಿಯನ್ನು ನೋಡಲಾಗದೆ ಈ ಉಪಾಯವನ್ನು ಸೂಚಿಸುತ್ತೇವೆ. ನಮ್ಮ ಪ್ರಯೋಗಗಳಿಗೂ ಸಂಶೋಧನೆಗಳಿಗೂ ಆಗಿರುವ ಖರ್ಚು

ರೂ. ೨೯೯-೯೯ ಯನ್ನು ಕೊಡುವುದಾದರೆ ನಮ್ಮ ಸಂಶೋಧನೆಯ ಹಕ್ಕುಗಳನ್ನು ನಿಮಗೆ ಬಿಟ್ಟುಕೊಡುತ್ತೇವೆ. ಮತ್ತು ನಿಮ್ಮ ವಿರುದ್ಧ ಪ್ರಕಟಿಸಬೇಕೆಂದಿರುವ ಎಲ್ಲಾ ಪ್ರಚಾರಗಳನ್ನು ನಿಲ್ಲಿಸಿ ನಿಮ್ಮ ಸೋಪುಗಳನ್ನು ಪತ್ರಿಕೆಗಳಲ್ಲಿ ಹೊಗಳುತ್ತೇವೆ. ಈ ನಿಯಮಕ್ಕೆ ತಪ್ಪಿದ್ದೇ ಆದರೆ ನಿಮ್ಮ ಕೈಗೆ ಚೊಂಬೇ ಗತಿಯೆಂದು ತಿಳಿಸಲು ನಾವು ಹರ್ಷಿಸುತ್ತೇವೆ.

ಕೈಲಾಸಪಾಳ್ಯಂ,
ತಾ|| ೧೧—೩—೧೯೫೯.

ಇತಿ,
ಗೃ. ವಿ. ಸಂ. ಪರವಾಗಿ,
ಜನೋಪಕಾರಿ ಕತ್ತಿಮಾಸೆ ನರಸಿಂಹಯ್ಯ,
ಛೇರಮೇನ್.



"ಈ ಸರ್ತಿ ನೀನು ಬರ್ಸಿದ ಉತ್ತರ ಎಲ್ಲಾ ತಪ್ಪು ...ಮುಂದಿನ ವರ್ಷಾನಾದ್ರೂ ಚೆನ್ನಾಗಿ ಓದಿ ಉತ್ತರ ಬರೆಸಪ್ಪಾ."

ಗಾನ ಪ್ರಿಯರು

"ಸಾಕು ಕಣೇ, ಅತಿ ತಿಂದ್ರೆ ನೈಗೆ ಆಗುಲ್ಲ"

ರಘು ತನ್ನ ನವ ಮಡದಿ ತಂದಿಟ್ಟ ಹರಕಲು ಮುತ್ತುಗದೆಲೆ, ಅದರ ತುಂಬಾ ಇದ್ದ ಹಸಿರು ಮೆಣಸಿನಕಾಯಿ ಚೂರು....ಅಲ್ಲ ಹೆಸರುಬೇಳೆ ಕೊಸಂಬ್ರಿಯನ್ನು ನೀರು ತುಂಬಿದ್ದ ಕಣ್ಣು ಬಾಯಿಗಳನ್ನು ಬಿಡುತ್ತಾ ಹೇಳಿದ.

"ತೊಗೊಳ್ಳೀಂದ್ರೆ! ಅಂಥಾ ದಿವಿನಾಗಿ ಮಾಡಿದ್ದೀನಿ. ನೆನ್ನೆ ಪಾತು, ಮನೇಗೆ 'ಕೋಸುಂಬ್ರಿ ಪಾನಕ'ಕ್ಕೆ ಬಂದಿದ್ದಾಗ, ಇದನ್ನ ನೋಡಿ ಕುಣಿದಾಡಿ ಬಿಟ್ಳು! ಇಲ್ಲೇ ಅಷ್ಟನ್ನೂ ತಿಂದ್ರೆ ರಾತ್ರಿ ಊಟ ಸೇರೊಲ್ಲಾಂತ, ಎಲ್ಲಾ ಮನೇಗೆ ತೊಗೊಂಡು ಹೋದ್ಳು!....ನಾನೂ ಇಷ್ಟೊಂದು ಮಾಡ್ಬಾರ್ದಿತ್ತು. ಎಲ್ಲಾ ಹಾಗೇ ಮಿಕ್ಕಿದೆ. ಮುಸುರೆಯೋಳಿಗೆ ಕೊಟ್ರೆ ದಂಡ ಆಗುತ್ತೆ......."

"ಹೌದು ಹೌದು! ಅವಳಿಗ್ಯಾಕೆ ಕೊಡಬೇಕು....ಎಲ್ಲಾ ದಂಡ ಮಾಡ್ತಾಳೆ. ಹಾಂ....ಮೆಣಸಿನಕಾಯಿ.......!"

"ಮೆಣಸಿನಕಾಯಲ್ಲಯ್ಯಾ, ನಾನು ಸೀತಾಪತಿ.......ರಾಮನವಮಿ ಕಳೆದು ಒಂದು ದಿನ ಆದ್ರೂ ಇನ್ನೂ ಇಟ್ಟಿದ್ದೀರಲ್ಲ ನಿಮ್ಮ ಸರಕು?" ಎನ್ನುತ್ತಾ ಬಣ್ಣವಾಗಿ ಕೋಸುಂಬ್ರಿ ಮಗ್ಗುಲಲ್ಲೇ ಬಂದು ಕುಳಿತ.

"ಲೇ! ಇನ್ನಿಗೂ ಕೋಸಂಬ್ರಿ ಕಳ್ಸಿ" ಕೂಗಿದ ರಘು, "ಅದು ಸರಿ ಸೀತಾಪತಿ, ನೆನ್ನೆ ರಾಮ ಮಂದ್ರದಲ್ಲಿ ಹೇಗಿತ್ತು ಕಛೇರಿ?"

"ಅದೇನು ಕೇಳ್ತೀಯಯ್ಯ! ನೆನ್ನೆ ನಂಗೆ ನೂರು ರೂಪಾಯಿ ಸಂಪಾದನೆ"

"ಅದ್ಯಾವ ಮಹಾನುಭಾವ ಕರೆದನಯ್ಯ ನಿನ್ನ ಹಾಡೋದಕ್ಕೆ?" ಹಳಸಿದ ಕೋಸಂಬ್ರಿಯಲ್ಲಿದ್ದ ಮೆಣಸಿನಕಾಯಿ ಚೂರು ಹೊಟ್ಟೆಯಿಂದ ಗಂಟಲಿಗೆ ಹಾರಿ, ಮೂಗು ಬಾಯಿಗಳಿಂದ ಖಾರ, ನೀರು ಸುರಿಸುತ್ತಾ ಕೇಳಿದ ರಘು.

ಖರ್ಚಾಗದೆ ಮಿಕ್ಕಿದ್ದ ಕೊಸಂಬ್ರಿಯಲ್ಲಾ ದೊಡ್ಡ ಬೆಳ್ಳಿ ತಟ್ಟೆಯಲ್ಲಿ ಬಂದಿತು. ಹಿಂದೇ ಬಂತು ಎರಡು ಮೊಳ ಉದ್ದದ ಲೋಟದ ತುಂಭಾ....ನೀರು!

ರಘು ಮಾವ ತುಂಬಾ ಜಾಣ. ಬೇಡದಿರೊ ಪದಾರ್ಥನೆಲ್ಲಾ ನವೀನ ರೀತಿಯಲ್ಲಿ ನಗು ನಗುತ್ತಾ ವಿನಿಯೋಗಿಸಿ "ಭೇಷ್" ಅನ್ನಿಸಿಕೊಳ್ಳೊ ವಿಜ್ಞಾನವನ್ನ, ಅರೆದೂ, ಕುಟ್ಟಿ ನೀರಾಗಿ ಮಾಡಿ, ಮಗಳ ಕಿವಿ, ಕಣ್ಣು ಮೂಗು ಮುಚ್ಚಿ ಗೊಟಕ್ಕಂತ ಕುಡಿಸಿದ್ದ.

ಸೀತಾಪತಿ ಕೋಸಂಬ್ರಿಯನ್ನ ಬಾಯಿಗೆ ತುರುಕಿ, ಕಚ ಕಚ ಅಗಿದು, ಅರ್ಧ ಲೋಟ ನೀರು ಕುಡಿದು ಮೂತಿ ಒರೆಸಿಕೊಳ್ಳುತ್ತಾ ಕಥೆ ಶುರುಮಾಡಿದ.

"ರಾಮೋತ್ಸವದ ಸಂದರ್ಭದಲ್ಲಿ ಸಂಗೀತ ಏರ್ಪಾಡಿಗೆ ಓಡಾಡ್ತಾ ಇರೋವಾಗ, ನಂಗೂ ಅಂಜನಪ್ಪನಿಗೂ ಜಗಳ ಬಿತ್ತು. ನಾನು, ಮಗ್ಗಲೂರ ರಾಘವಯ್ಯನ್ನ ಕರಸೋಣಾಂತ, ಅವ್ನು ವಿಘ್ನೇಶ್ವರ ಭಾಗವತರನ್ನ ಕರೆಸೋಣಾಂತ. ನಾನು ರಾಘವಯ್ಯ ಚೆನ್ನಾಗಿ ಹಾಡ್ತಾನೇಂತ, ಅವನು ಭಾಗವತರು ಚೆನ್ನಾಗಿ ಹಾಡ್ತಾರೇಂತ ...."

"ಹೂ........ಮುಂದಕ್ಕೆ?........ತೊಗೊ ಕೋಸಂಬ್ರೀನ!" ರಘೂಗೆ, ಹಳಸಿಲ ಕೋಸಂಬ್ರಿಯಿಂದ ಸೊಳ್ಳೆ ಜಾಸ್ತಿ ಆಗುತ್ತೆಂಬ ಭಯ. ತಿನ್ನಲಾರದ ಸಂಕಟಕ್ಕೆ ಸಿಕ್ಕಿ, ತಿಂದು, ಅರ್ಧ ಲೋಟ ನೀರು ಕುಡಿದು, ಕಥೆ ಮುಂದುವರಿಸಿದ ಸೀತಾಪತಿ.

"ಸರಿ....ಮಾತಿಗೆ ಮಾತು ಬೆಳೆದು....ಕೈ ಕೈ ಹತ್ತೋದ್ರೊಳಗೆ....ಹನುಮಂತ ಪೂಜಾರಿ ಬಂದು........ಜಗಳವಾಡಿ ಕೈಕಾಲು ಯಾಕೆ ಮುರ್ಕೋತೀರಿ........ನೂರು ರೂಪಾಯಿ ಬಾಜೀ ಕಟ್ಟಿ....ಯಾರು ಜಾಸ್ತಿ "ಭೇಷಾ" "ಶಹಭಾಸ್" ಗಿಟ್ಟಿಸುತ್ತಾರೋ ಅವ್ರೇ ಗೆದ್ದ ಹಾಗೇಂದ" "ಹಾಳಾದೋನು........ಗೆದ್ದೋರು ತನ್ನ ಹನುಮಂತನಿಗೆ ಪಂಚಾಭಿಷೇಕನೂ ಮಾಡಿಸಬೇಕೂಂತ ಹಟ ಹಿಡ್ದ".

"ಇಬ್ಬರ ಕಥೇರೀನೂ ಅವತ್ತೇ ಇಟ್ಟೆವು. ಮೊದಲು ಭಾಗವತರದ್ದು ಶುರು ಆಯ್ತು. ನಾನೂ, ಆಂಜನೇಯಪ್ಪನೂ ಹುಣಸೇ ಬೀಜದ ಗುಡ್ಡೆ ಮುಂದಿಟ್ಟುಕೊಂಡು ಕೂತೆವು. ಒಂದೊಂದು "ಭೇಷ್" "ಶಹಭಾಸ್" ಗೂ ಒಂದೊಂದು ಹುಣಸೇ ಬೀಜ ಜೋಬು ಸೇರುತ್ತಿತ್ತು ..." ಇದ್ದಕ್ಕಿದ್ದಂತೆ ಸೀತಾಪತಿ ಕೆಮ್ಮೋಕ್ಕೆ ಶುರುಮಾಡ್ದ. ರಘುಗೆ ಗೊತ್ತು ಯಾತಕ್ಕೆ ಕೆಮ್ಮುತಾನೆಂತ. ಕೂಡಲೇ.

"ಒಂದು ಲೋಟಾ ನೀರು ಕಳ್ಸು........ತುಂಬಾ ಖಾರಾಂತ ಕಾಣುತ್ತೆ ಕೋಸುಂಬ್ರಿ" ಕೂಗಿದ ರಘು.

ಪಾನಕ ಬರುತ್ತೇಂತ ಕಾದಿದ್ದ ಸೀತಾಪತಿ ತಂದಿಟ್ಟ ನೀರನ್ನ ಒಂದೇ ಸಾರ್ತಿಗೆ ಕುಡಿದು ಕೆಂಗಣ್ಣು ಬಿಡುತ್ತಾ ಮುಂದರಿಸಿದ.

" ಭಾಗವತರ ಸಂಗೀತ ಮುಗಿಯೋ ಹೊತ್ತಿಗೆ ರಾತ್ರಿ ಒಂಭತ್ತು ಗಂಟೇ ಆಯ್ತು. ಎಣಿಸೋಕಾಂತ ಜೋಬಿಗೆ ಕೈ ಹಾಕಿದೆ, ಕೈ ಒಳಗೇ ಹೋಗೊಲ್ಲ. ಚೆಂಡಿನ ಹಾಗಾಗಿತ್ತು ಜೋಬು ಹುಣಸೇ ಬೀಜದಿಂದ. ಖಾತ್ರಿ ಮಾಡ್ಕೊಂಡೆ ನೂರು ರೂಪಾಯಿ ಕೈ ಬಿಡ್ತು ಅಂತ. ' ಸ್ವಲ್ಪ ಮನೇಗೆ ಹೋಗಿ ಬರ್‍ತೀನೀ'ಂತ ಹೊರಟೆ.

" ರಾಘವಯ್ಯನ ಸಂಗೀತ ಶುರು ಆಗೋ ಹೊತ್ಗೆ ಜನರೆಲ್ಲಾ ತೂಕಡಿಸ್ತಾ ಇದ್ರು. ಆಂಜನೇಯಪ್ಪ ನನ್ನ ನೋಡಿ ಮೀಸೆ ಕುಡಿ ಕಡಿದು ನಕ್ಕ. ನಾನೂ ನಕ್ಕೆ. ಅವ ಗಾಬರೀ ಆದ! ಸಭೆಯಲ್ಲಿದ ಜನವೆಲ್ಲಾ ನಿದ್ದೇ ಮಾಡ್ತಾ ಇರೋವಾಗ ರಾಘವಯ್ಯನಿಗೆಲ್ಲಿ ಸಿಕ್ಕತ್ತೇ! " ಭೇಷ್ " ಅಂತ ತಲೆ ಕೆರೆದು ತುಟಿ ಕಡಿದ. ಅವನ ತಲೇಗೆಲ್ಲಿ ಹೊಳೆಯುತ್ತೆ........ಆ ವಾನರ ಭಂಟನಿಗೆ........ರಾಘವಯ್ಯನ ಸಂಗೀತ ಶುರು ಆಯ್ತು. ಎರಡೆರಡು ನಿಮಿಷಕ್ಕೂ " ಭೇಷ್ " " ಶಹಭಾಸು "ಗಳು ಬೀಳ್ತಿದ್ದುವು. ಸಂಗೀತವೆಲ್ಲಾ ಮುಗಿದು ಜನವೆಲ್ಲಾ ಹೋದಮೇಲೆ, ನಾನೂ, ಆಂಜನೇಯಪ್ಪ, ಅಂಪೈರ್ ಪೂಜಾರಿ, ಮೂರು ಜನವೂ ಕೂತೆವು ಹುಣಸೇ ಬೀಜ ಎಣಿಸೋಕ್ಕೆ ಅರ್ಧಗಂಟೆಯ ನಂತರ ಪೂಜಾರಿ, Result announce ಮಾಡ್ದ. ರಾಘವಯ್ಯನಿಗೆ ೫೦೦ ' ಬೇಷ್ 'ಗಳು....ಭಾಗವತರಿಗೆ ' ೩೫೦ ' ' ಭೇಷ್ 'ಗಳು! ಆಗ ನೋಡಬೇಕಿತ್ತು ಆಂಜನೇಯ(ಪ್ಪ)ನ ಮುಖಾನ! "

ಕಥೆ ಹೇಳ್ತೋ ಆನಂದದಲ್ಲಿ ಹಳಸಿದ ಕೋಸಂಬ್ರಿ, ಮೆಣಸಿನಕಾಯಿನ ಖಾರಾ ಮರೆತಂತಿತ್ತು ಸೀತಾಪತಿ. ಇನ್ನರ್ಧ ಲೋಟಾ ನೀರು ಕುಡಿದು ಭರ್‍ರಂತ ತೇಗಿದ. ಸಮಾಧಾನದ ಉಸಿರು ಬಿಡುತ್ತಾ ರಘು,

" ಅಲ್ಲಾ ಸೀತಾಪತಿ! ಅದು ಹ್ಯಾಗೆ ರಾಘವಯ್ಯನಿಗೆ ೫೦೦ " ಭೇಷ್ "ಗಳು ಸಿಕ್ಕವು ಸಭೆಯಲ್ಲಾ ನಿದ್ದೆ ಮಾಡ್ತಾ ಇದ್ದಾಗ? "

ಆಗ ಸೀತಾಪತಿ ಹೇಳಿದ " ಅಯ್ಯೋ ಅಷ್ಟು ತೀಳೀಲಿಲ್ವೆ! ಹಬ್ಬಕ್ಕೇಂತ ಮನೇಗೆ ನಮ್ಮಕ್ಕ, ಅವರ ಡಜನ್ ಮಕ್ಳು ಬಂದಿದ್ದು ಅವರ ಕಾಟದಿಂದ ರಾತ್ರಿ ನಿದ್ದೇ ಬರ್‍ತಿರಲಿಲ್ಲ. ಕೊನೆಗೆ ಆ ಪಿಳ್ಳೆಗಳನ್ನೆಲ್ಲಾ ರಾವ್ಟ ಮಂದಿರಕ್ಕೆ ಎಳಕೊಂಡು ಬಂದು ಎರಡೆರಡು ನಿಮಿಷಕ್ಕೂ 'ಬೇಷ್' 'ಶಹಭಾಸ್' ಅಂತಾ ಇರಿ, ಬೆಳಗ್ಗೆ ಪಾನಕ ಕೊಡ್ತೀನಿಂದೆ........ಅದ್ನರಿ........ತುಂಬಾ ಥ್ಯಾಂಕ್ಸ್ ನಿನ್ನ ಹಳಸಿದ ಕೋಸಂಬ್ರೀಗೆ........ನೀನು ಕೊಟ್ಟೆಲ್ಲಾಂತ ಸ್ವಲ್ಪ ತಿಂದೆ. ನೆನ್ನೆ ಸಂಗೀತದ ಗಲಾಟೇಲಿ ತಿನ್ನೋಕೇ ಆಗ್ಲಿಲ್ಲ...." ಎಂದೆನ್ನುತ್ತಾ ಹೊರಟ.

ರಘು ನಿಧಾನವಾಗಿ ಬೆಳ್ಳ ತಟ್ಟೆ ಕಡೆ ತಿರುಗಿದ. ಅಲ್ಲೇನಿದೆ! ಕೊಸಂಬ್ರಿ ಇರ್‍ಲಿ, ಅದರ ಹಳಸಿದ ವಾಸನೆಯೂ ಇರ್‍ಲಿಲ್ಲ. ಅಲ್ಲಿ! ಎಷ್ಟಾದ್ರೂ ಸೀತಾಪತಿಯ ಪ್ರಿಯ ತಿಂಡಿ ಅಲ್ವೆ ಕೋಸುಂಬ್ರಿ!

—ಹ. ಸು.

ಭಕ್ತ ಮಾರ್ಕಂಡೇಯ

ಜಂಬೂದ್ವಿಪದ, ಭರತಕ್ಷೇತ್ರದ, ಕರ್ನಾಟಕನಾಡಿನ, ಮೈಸೂರು ಜಿಲ್ಲೆಯ, ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಹೋಬಳಿ, ಚಂದ್ರಿಗ್ರಾಮದ, ಕೊಪ್ಪಲ ಮಾದಯ್ಯನ ಹುಂಡಿ ಗೌಡರ ಕೇರಿಯ ಚಾಮೆಗೌಡನು, ಅವನ ಭಾರ್ಯೆ ಚೌಡಮ್ಮನು ಇಷ್ಟವಿಷಯ ಕಾಮಭೋಗಂಗಳನ್ನು ಅನುಭವಿಸುತ್ತಿರಲು, ಒಂದು ದಿನ, ಕನಸಿನಲ್ಲಿ ವೃದ್ಧ ಬ್ರಾಹ್ಮಣನೊಬ್ಬನು ಕಾಣಿಸಿಕೊಂಡು, ನಿನಗೆ ಘಾಟಿ ತಿಲಕ ಶ್ರೇಷ್ಠ ಕುಮಾರನು ಜನಿಸುವನೆಂದು ಹೇಳಿ ಮಾಯವಾದನು.

ಮುಂಜಾನೆ ಎದ್ದ ದಂಪತಿಗಳು ರಾತ್ರಿಯಾದ ಕನಸನ್ನು ಜ್ಞಾಪಿಸಿಕೊಂಡು, ತಮ್ಮ ಮಾದೇಶ್ವರಯಾತ್ರೆ, ನಂಜಪ್ಪನ ಹರಕೆ, ವೆಂಕಟರಮಣನ ಆಶೀರ್ವಾದ, ಕೆಂಡಗಣ್ಣಪ್ಪನ ಕೃಪೆಯಿಂದ ತಮಗೆ ಪುತ್ರ ಸಂತಾನವಾಗುವುದೆಂದು ಸಂತೋಷಿಸಿ, ಇಷ್ಟದೇವರುಗಳನ್ನು ವಂದಿಸಿದರು.

ಬಯಕೆಯ ಬಸುರು ಬೆಳೆದು ವಿಜಯಾಭ್ಯುದಯ ಶಾಲೀವಾಹನಶಕ ೧೮೫೭ನೇ ಭಾವಸಂವತ್ಸರದ ಮಾಘಮಾಸ ತೇದಿ ಕೃಷ್ಣ ತೃತಿಯೇ ವೃಷಭ ಲಗ್ನದಲ್ಲಿ ಗಂಡು ಶಿಶುವಿಗೆ, ಸದರೀಗ್ರಾಮದ ತಾಲ್ಲೂಕಿನ ಹೆರಿಗೆ ಆಸ್ಪತ್ರೆಯಲ್ಲಿ, ಚೌಡಮ್ಮ ಪುತ್ರನಿಗೆ ಜನ್ಮವಿತ್ತಳು.

ಇತ್ತ ಗೌಡನು ಗಂಡು ಶಿಶುವಾದುದನ್ನ ಕೇಳಿ, ಹೇಳಿದ ಆಯಳಿಗೆ ಒಂದು ರೂಪಾಯಿ ಬಹುಮಾನವನ್ನು ಕೊಟ್ಟು ಹರ್ಷದಿಂದ ಎದುರೇ ಸಿಕ್ಕಿದ ಚಾಮುಂಡಿ ಭವನಕೆ ಜಿಗಿದು, ಕುರ್ಚಿಯಲ್ಲಿ ಕುಳಿತು, ಬಾದಾಮಿ ಹಲ್ವ, ಜಹಂಗೀರು, ಹಾಲುಕೋವ, ಮೈಸೂರುಪಾಕು, ಕೇಸರಿಬಾತು, ಲಾಡು, ಫ್ರೂಟುಸಾಲ್ಡ್, ಜಾಮೂನು, ಜಿಲೇಬಿಗಳನ್ನು ಮಾಣಿಗೆ ತರಲು ಅಪ್ಪಣೆ ಮಾಡಿ, ಅವುಗಳ ಬರವನ್ನ ನೋಡುತ್ತ, ಆಕಳಿಸುತ್ತ ಕುಳಿತಿರಲು,

ಇತ್ತ ಆಸ್ಪತ್ರೆಯಲ್ಲಿ; ಮಲಗಿದ್ದ ಚೌಡಮ್ಮ ಕಣ್ಣುಬಿಟ್ಟು ಪಕ್ಕದಲ್ಲಿದ್ದ ವಿಗ್ರಹದ ತದ್ರೂಪ ಸಿಂಧುವಾದ ಕುಮಾರನನ್ನು ನೋಡಿ, ಮುತ್ತಿಟ್ಟು: 'ಅವ್ರಂಗೆ ಅದೆ ಹೈದ"ನೆಂದು ಉದ್ಗಾರವೆಳೆದು, ಸಮಾಧಾನದ ನೆಟ್ಟುಸಿರು ಬಿಟ್ಟಳು.

ಹನ್ನೊಂದು ದಿನಗಳು ಉರಳಲು, ಆಸ್ಪತ್ರೆಯಿಂದ ಡಿಸ್ಚಾರ್ಜ ಮಾಡಲು ; ಊರಿಗೆ ಬಂದು, ಕೊಬ್ಬಿದ ಟಗರೊಂದನ್ನು ಕಡಿದು ಔತಣವನ್ನೇರ್ಪಡಿಸಿ ಮಗನಿಗೆ ಮಾರ್ಕಂಡೇಯನೆಂದು ಹೆಸರಿಟ್ಟು, ನಾರಿಮಣಿಯರಿಂದ ಹಾರೈಸಿಸಿ, ನಾಡಪದಗಳನ್ನ 'ಸರಾಗ'ದಲ್ಲಿ ಹಾಡಿಸಿ, ಚಾಮೇಗೌಡನು ತೃಪ್ತಿನಗೆ ನಕ್ಕನು.

ಬ್ಲೋ ಮಾಡಿದ ಮೊಟಾರು ಟ್ಯೂಬು ವೃದ್ಧಿಯಾಗುವಂತೆ, ಕ್ರಮ ಕ್ರಮವಾಗಿ ಕುಮಾರ ಮಾರ್ಕಂಡೇಯನು ವೃದ್ಧಿಯಾದನು. ಏಳನೆಯ ವರ್ಷದ ಪ್ರಾಯಕ್ಕೆ ಬರಲು ಪ್ರಶಸ್ತವಾದ ದಿನ ಊರಿನ ಶಾಸ್ತ್ರಿಗಳಾದ ಗೊಜ್ಜು ಹೊಟ್ಟೆಯ ಗುಂಡಾಶಾಸ್ತ್ರಿಯನ್ನು ಕರೆದು ಹಲಗೆಯ ಮೇಲೆ 'ಓಂ' ಎಂದು ಬರೆಯಿಸಿ, ಶಾಸ್ತ್ರಿಗಳಿಗೆ ಕಾಯಿ, ಹಣ್ಣು, ಎಲೆ ತಾಂಬೂಲಗಳನ್ನು ಕೊಟ್ಟನು. ಹಬ್ಬಕ್ಕೆ ಬಂದಿದ್ದ ತಂಗಿ ಚಾವುಂಡವ್ವನು, ಅಣ್ಣನಲ್ಲಿ: "ಅಣ್ಣಾ, ಮಾರ್ಕಂಡನ್ನು ನನ್ಜತೆ ಕಳ್ಸು ಸಿಂಗಾರು ಜೊತೆನಾಗೆ ಓದ್ಕೊಂಡು ಅಮಲ್ದಾರ್ನಾದ್ರೆ, ನನ್ನ ಮಗಳು ಸಿಂಗಾರೀನೇ ಕೊಡ್ತೀನಿ" ಎನ್ನಲು, ಚಾಮೆಗೌಡನು ತಂಗಿಯ ಮಾತು ಕೇಳಿ "ಹಾಗೆ ಮಾಡು ತಾಯಿ ನಿನ್ನಾಸ್ಯಗೆ ನಾನ್ಯಾಕೆ ಮೂಳಿ ಆಗ್ಲಿ" ಎಂದನು..........................

ಮೈಸೂರು ಸೇರಿದ ಮಾರ್ಕಂಡೇಯ :

ಬಲು ಚೂಟಿಯಿಂದ, ಗೋಲಿ, ಬಳಪ, ಸ್ಲೇಟು ಖಾಲಿ ನೋಟು ಬುಕ್ಕುಗಳನ್ನ ಕಂಡವರಿಗೂ ಕಾಣದಂತೆ ಮಾಯ ಮಾಡಿ, ಸಂತೇಬೀದಿ, ಮಾರ್ಕೆಟ್ಟು ಚೌಕ, ಸಿನೆಮಾ ಟಾಕೀಸು, ಒಂದುವರಾಣೆದಲ್ಲಿ, ಇಂದ್ರಭವನದ ರಾಘವೇಂದ್ರ ರಾಘವೇಂದ್ರ ಸ್ವಾಮಿಗಳ ಮಠಗಳಿಗೆ ಬೇಟಿ ಕೊಡುತ್ತ, ವಿರಾಮ ವೇಳೆಯಲ್ಲಿ ಸ್ಕೂಲಿಗೆ ತನ್ನ ಹಾಜರಿ ಸಲ್ಲಿಸುತ್ತ ಹಾಗೂ ಹೀಗೂ ಪೇಲು, ಪಾಸು, ಪಾಸು, ಪೇಲುಗಳು ಖಾರಿ, ಕೊಲ್ಲಿ ಸುಳಿವುಗಳಲ್ಲಿ ಸಿಕ್ಕು ಹಾಕಿಕೊಂಡರೂ ಕಷ್ಟಪಟ್ಟು-ದುಡ್ಡು ತೆತ್ತಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಲಾಗ ಹಾಕಿ ಕೊನೆಗೆ ಪಾಸಾದ.

ತಂದೆ ತಾಯಿಗಳು ಮಗನು ಪಾಸಾದುದನ್ನು ಕೇಳಿ ಸಂತೋಷಗೊಂಡರು, ಮುಂದೆ ಓದಿಸಬೇಕೆಂದಿದ್ದರು. ಆಗಲೇ ಚಿಗುರಿದ್ದ ಮೇರಿ ಪ್ರೇಮದ ಭಾರದಿಂದ, ಯಾವುದಾದರೂ ಕೆಲಸ ಹಿಡಿದು, ಅವಳನ್ನು ವರಿಸಬೇಕೆಂದು ಮನಸ್ಸು ಮಾಡಿದ್ದ ಮಾರ್ಕಂಡ ಅವನ ಅದೃಷ್ಟಕ್ಕೆ ಸರಿಯಾಗಿ ಪಿ. ಡಬ್ಲ್ಯು. ಡಿ. ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಕಾರಕೂನರು, ವಾತ, ಪಿತ್ಥ ಜಾಸ್ತಿಯಾಗಿ ಮೂರು ತಿಂಗಳು ರಜಾ ಹಾಕಿ ಊರಿಗೆ ಹೋದರು, ಹೋದರು, ಹೊರಟೇ ಹೋದರು. ಹಿಂತಿರುಗಿ ಬರಲಿಲ್ಲ. ಅವರ ಜಾಗ ಖಾಲಿ ಬಿತ್ತು, ಆಗ ಇಂಜಿನಿಯರಿಗೆ ಸ್ವಲ್ಪ ಹಾಗೂ ಹೀಗೂ ನಮಸ್ಕರಿಸಿ ಅವರ ಕಾರಕೂನನಿಗೆ ಸ್ವಲ್ಪ 'ಖಾರ' ತಿನ್ನಿಸಿ ಆ ಕೆಲಸದ ಮೇಲೆ ಹಾಜರಾದ. ಕೊನೆಗೆ ಅದೇ ಖಾಯಂ ಆಯ್ತು.

ಕಾರಖೂನನಾದ ಮೇಲೆ, ಟೋಪಿ, ಕೋಟು, ಛತ್ರಿ ಟ್ರವಷರು ಧರಿಸಿ—ಸಂದಿ ಗೊಂದಿಗಳನ್ನು ಮೇರಿಯೊಡನೆ ಅಲೆಯುತ್ತ ಕಾಲ ಕಳೆಯತೊಡಗಿದ. ಗಾಳಿ ಹೇಗೊ ಈ 'ವರ್ತಮಾನವನ್ನ ಸಾರ್ವಜನಿಕ ಸ್ವತ್ತು ಮಾಡಿಧ; ಅವನ ತಂದೆ ತಾಯಿಗಳಿಗೂ ಮುಟ್ಟಿಸಿದ, ನಂತರ ಅವರು ಪಾರ್ವತಿಯನ್ನು ತಂದು .ಗಂಟು ಹಾಕಿದರು.

ಪಾರ್ವತಿ—ಬಾಯಿ. ಅಭ್ಬಾ ! ಯಾವ ಧ್ವನಿ ವರ್ಧಕಗಳೂ ಅವಳ ಮುಂದೆ ಮೂಗು ಬಾಯಿ ಮುಚ್ಚಿಕೊಂಡು "ಪಾರ್ವತಿ ಎಂಬೋ" ಎಂದು ಸುಮ್ಮ ನಾಗುತ್ತಿದ್ದವು.

ಪಾರ್ವತಿ ಬಂದ ಮೇಲೆ ಮೇರಿಯನ್ನು ಬಿಟ್ಟು, ಪಾರ್ವತಿಯೊಡನೆ ಕಾದಾಟ ಜೀವನವನ್ನು ಮಾಡಲುಉಪಕ್ರಮಿಸಿದ ಅವನು.ಮೇಜು ಚಿಕ್ಕದಾಗಿದ್ದರೂ ನೂರಾರು ಬಿಲ್ಲುಗಳು ಬಂದು ಬೀಳಲು ಶುರುಮಾಡಿದವು. ಬೆಳಗಿನಿಂದಲೂ ಕುರ್ಚಿಯಲ್ಲಿ ಕುಳಿತು ಶರೀರಕ್ಕೆ ಶಾಖ ಹೆಚ್ಚಿಸಿಕೊಂಡ. ಆ ಶಾಖವನ್ನು ಕಳೆದುಕೊಳ್ಳಲು, ಬಿಲ್ಲು ದಾರರ ಜೊತೆಯಲ್ಲಿ ಕಾಫಿ, ತಿಂಡಿ, ಸಿಹಿ, ಖಾರ ಇತ್ಯಾದಿಗಳನ್ನು ತಿಂದ.

ಶಾಖ ಜಾಸ್ತಿಯಾಯಿತು, ಪೆಬ್ರವರಿ, ಮಾರ್ಚಿ ತಿಂಗಳು ಬಿಲ್ಲು ಮೂಟೆಗಟ್ಟಲೆ ಮೇಜಿನ ಮೇಲೆ ಪ್ರತ್ಯಕ್ಷವಾಗತೊಡಗಿತು. ಸಾವಿರ, ಐದುಸಾವಿರ, ಲಕ್ಷ, ರೂಪಾಯಿಯ ಬಿಲ್ಲೆಯರು ನರ್ತನ ಮಾಡತೊಡಗಿದರು. ಬಿಲ್ಲೆಯರನ್ನ ಪಡೆಯಲು ತಪಸ್ಸು ಮಾಡುತ್ತಿದ್ದವರು, ನೂರು—ನೂರಾರು, ಜೇನುಸರ, ರೇಡಿಯೋಗಳನ್ನ ಭಕ್ತಿ ಪೂರ್ವಕವಾಗಿ ಅರ್ಪಿಸಿದರು ಪೂಜಾರಿಗೆ—ಭಕ್ತ ಮಾರ್ಕಂಡೇಯನಿಗೆ.

ಇತ್ತ ಮಿ|| ಯಮುನ ಎಂಬ ಲಂಚ ನಿರೋಧ ಶಾಖೆಯ ಅಧಿಕಾರಿಗಳು ಗ್ರಾಮ ನಗರ ಖೇಡ ಖರ್ವಡಮಡಂಬ ಪಟ್ಟಣ ದ್ರೋಣಾಮುಖಂಗಳನ್ನು ಸಂಚರಿಸುತ್ತಾ ಬರಲು, ಮಾರ್ಕಂಡೇಯನ ವಿಷಯ ತಿಳಿಯಲು ಆಫೀಸಿನ ಮುಂದೆ ಪ್ರತ್ಯಕ್ಷನಾಗಲು ಅಂದೇ ಕರವಸ್ತ್ರದ ಮೇಲೆ ಅವರೇ ಕೊಟ್ಟು ಕಳುಹಿಸಿದ 'ಕರ್ಪೂರ' ನೋಟುಗಳ ಸಹಿತ ಬರ್ದ,

"ತೀರಿತಯ್ಯ ನಿನ್ನ ಆಯುಸ್ಸು, ಇನ್ನಾ ಚಿಕ್ಕ ವಯಸ್ಸು"

—ಗೋಣು ಮುರಿಯುವ ಧ್ವನಿಯಲ್ಲಿ ಹೇಳಿದರು.

ಮಾರ್ಕಂಡೇಯ ಮಹಾಭಕ್ತ !

ಮೊದಲಿನಿಂದಲೂ, ಭಕ್ತ. ತಾಲ್ಲೂಕು ಸಂಸ್ಥೆಯ ಅಧ್ಯಕ್ಷರೂ, ನ್ಯಾಯಾಂಗ ಸಚಿವರ ಮಾವಂದಿರೂ, ಸತ್ಯಾಗ್ರಹ ಪುರಾಣ ಪ್ರವೀಣರೂ ಆದ ಕಂಠಿಗಳ ಅಚ್ಚು ಮೆಚ್ಚಿನ ಭಕ್ತ.

ತನ್ನ ಭಕ್ತ ಎಷ್ಟರಮಟ್ಟಿಗಿರಬಹುದೆಂದು ಯೋಚಿಸಿ, ತಕ್ಷಣ ಅಲ್ಲಿಯೇ ಓಡಾಡುತ್ತಿದ್ದ, ಜವಾನ ಸಿದ್ಧನನ್ನು ಕರೆದು ಅಧ್ಯಕ್ಷ ಕಂಠಿರಾಯರನ್ನ ಕರೆತರ ಬೇಕೆಂದು ಕಿವಿಯಲ್ಲಿ ಹೇಳಿದ. ಜವಾನ ಓಡುತ್ತ ಹೋಗಿ ಆಗತಾನೆ ಸ್ನಾನಕ್ಕೆ ಸಿದ್ಧರಾಗುತ್ತಿದ್ದ ಕಂಠಿರಾಯರಿಗೆ ಪರಿಸ್ಥಿತಿಯನ್ನ ವಿವರಿಸಿದ.

" ಇವನು ನಿನ್ನ ಭಕ್ತ, ಹಲವಾರು ಭಾರಿ ನೀನು ಹೇಳಿದ ಕುಳಗಳ ಬಿಲ್ಲನ್ನು ಶಾಖವಿಲ್ಲದೆಯೆ ಕಳುಹಿಸುತ್ತಿದ್ದಾನೆ. ಆದ್ದರಿಂದ ಕಾಪಾಡು " ಎಂದು ಅಂತರಾತ್ಮ ನುಡಿದ ತಕ್ಷಣ ಕಂಠಿರಾಯ, ಹೆಂಡತಿ ಗೌರಿಗೆ, ತನ್ನ ಭಕ್ತನೊಬ್ಬನು ಸಾಯುತ್ತಿದ್ದಾನೆಂದು ಅವನನ್ನ ಕಾಪಾಡಬೇಕೆಂದು ಹೊರಟಿರುವುದಾಗಿ ತಿಳಿಸಿ ಬ್ಯೂಕ್ ಕಾರಿನಲ್ಲಿ ಬಂದ

ಬ್ಯೂಕ್ ಕಾರಿನಲ್ಲಿ ಬಂದ, ಕಂಠಿರಾಯರನ್ನ ಮಿ|| ಯಮೆನ್‌ರವರು ಕೈಜೋಡಿಸಿ ನಮಸ್ಕರಿಸಿದರು. ಇದನ್ನು ನೋಡಿದ ಮಾರ್ಕಂಡೇಯ ನಕ್ಕ, (ಮನಸ್ಸಿನಲ್ಲೇ.

" ಏನು ಬಂದಿರಿ, ನಮ್ಮ ಊರಿಗೆ "

—ಕಂಠಿಗಳು ಹೇಳಿದರು.

" ಮಾರ್ಕಂಡೇಯ— "

ಎಂದು ಮಾತನಾಡಲು ಬಾಯಿ ಬಿಟ್ಟತಕ್ಷಣವೇ ?

" ಸಿದ್ದಯ್ಯರಾಯರಿಗೆ ಒಂದಿಷ್ಟು ತಿಂಡಿ ತೆಗೆದುಕೊಂಬಾರೊ—ಹ್ಹೂ, ಜಲ್ದಿ "

—ಎಂದು ಮುಗಿಸಿ ಅವರ ಕಿವಿಯ ಬಳಿ: " ಅವನು ನನ್ನ ಭಕ್ತ ಬಿಟ್ಟುಬಿಡಿ. ಇನ್ನ ಚಿಕ್ಕ ವಯಸ್ಸು" ಎಂದರು.

" ನನ್ನ ಪ್ರೊಮೋಶ್ರ ಪೈಲು—ದಾಬೇ ಇಲ್ಲಾ, ಇನ್ನ ನಮ್ಮ ಮೇಲೆ ಕರುಣೆ ಬಂದಿಲ್ಲಾ " ಎಂದ.

"ಈ ವಾರ ಬೆಂಗಳೂರಿಗೆ ಬರುತ್ತೇನೆ—ನನ್ನನ್ನೆ ಕಾಣಿ, ಖಂಡಿತ ಮಾಡಿಸಿ ಕೊಡುತ್ತೇನೆ.

" ಹಾಗೆ—ಮಾಡಿ, ಈಗ ತಿಂಡಿ ಬೇಡಿ—ನಾನು ಬರುತ್ತೇನೆ ನಮಸ್ಕಾರ ವೆಂದು, ಹತ್ತಿಬಂದ ಕಪ್ಪುಕಾರನ್ನೇರಿ ಹೊರಟುಹೋದ.

" ನನ್ನ ಜೀವ, ಮಾನ ಕಾಪಾಡಿದಿರಿ"

—ಎಂದು ಕಂಠಿಗಳ ಬಳಿ ಬಂದ ಮಾರ್ಕಂಡೇಯ ತಲೆ ತಗ್ಗಿಸಿ ನಿಂತ.

" ಛೇ—ಇದೆಲ್ಲಾ ಏನು ಉಪಕಾರ, ಏನೊ? ಎರಡು ಮಾತು ನಡ್ಯೋ ಕಾಲದಲ್ಲಿ ಉಪಕಾರ ಮಾಡಬೇಕು ಅಷ್ಟೇ—ಹೋಗಲಿ ಬಸವಣ್ಣನ ಬಿಲ್ಲು ಪಾಸು ಮಾಡಿದಿಯಾ—ಮಾಡಿಬಿಡು. ಇನ್ನಾ ಸ್ನಾನ ಕೂಡ ಮಾಡಿಲ್ಲಾ ; ಕಾಯ್ತಾ ಇರ್ತಾಳೆ ಅವ್ವ " ಎಂದು ಕಾರನ್ನೇರಿ ಹೊರಟರು.

ಮಾರ್ಕಂಡೇಯ ಭಕ್ತನಾದುದಕ್ಕೆ ತನಗೆ ಒದಗಿದ ಕುತ್ತನ್ನು ಹೋಗಲಾಡಿಸಿ ಕೊಂಡು, ನಂತರ ಸುಖವಾಗಿ ' ಶಾಖಾಯ—ಲವಣಾಯ 'ವನ್ನು ಸ್ವಿಕರಿಸುತ್ತ ವರ್ಷಗಳನ್ನು ದೂಡತೊಡಗಿದರು.

ಇತಿ ಕೋಳಿಕೆ ರಚಿಸಿದ ಮಾರ್ಕಂಡೇಯ ಚರಿತ್ರೆ ಸಂಪೂರ್ಣಂ.

ಮಂಗಳಂ—ನಿತ್ಯಂ ಶುಭಂ ಮಂಗಳಂ.

ಹೆಚ್. ಆರ್. ಸುಂದರರಾಜ್,

ಮಿ|| ಆಲ್ಕಾಟರ ಬೇಟಿ

ಶಾಮಣ್ಣ ಮಧ್ಯಾಹ್ನ ಟೆಲಿಫೋನ್ ಮಾಡಿ ಸಾಯಂಕಾಲ ೭ಕ್ಕೆ ಮಿ|| ಡಾನ್ ಆಲ್ಕಾಟ್‌ರವರನ್ನು ನಮ್ಮನೆಗೆ ಕರೆದುಕೊಂಡು ಬರ್ತೀನಿ ಅಂದಾಗ ಸ್ವಲ್ಪ ಗಾಬರಿಯೇ ಆಯಿತು ನನಗೆ. "ಅವರನ್ನ ನನ್ನ ಹಳೇ ಕಂದಾಚಾರದ ಮನೆಗೆ ಯಾಕೆ ಕರೆದುಕೊಂಡು ಬರ್ತೀಯೋ" ಎಂದೆ.

"ಭಾರತದಲ್ಲಿ ಜನ ಹೇಗೆ ಜೀವಿಸುತ್ತಾರೆ ಅದನ್ನು ಕಣ್ಣಾರ ಅವರು ಕಾಣ ಬೇಕಂತೆ, ತುಂಬಾ ಒಳ್ಳೆಯವರು....ನೀನೇನೂ ತ್ರಾಸು ತೆಗೆದುಕೊಳ್ಳಬೇಡ" ಅಂದ ಶಾಮಣ್ಣ

"ಯಾರೋ ಆಲ್ಕಾಟ್ ಅವರು, ಯಾಕೆ ಬಂದಿದ್ದಾರೋ" ಎಂದೆ.

"ಅಮೆರಿಕಾದವರು ಕಣೋ. ಭಾರತ ಅಮೆರಿಕಾ ಮಧ್ಯೆ ಪರಸ್ಪರ ವ್ಯಾಪಾರ ಕುದುರಿಸಲು ಬಂದಿದ್ದಾರೆ. ಆ ಮಾತು ಈ ಮಾತು ಆಡ್ತಾ ನೀನು ಗೀತೆ ವಿಚಾರ ಚೆನ್ನಾಗಿ ಅಭ್ಯಾಸ ಮಾಡಿದ್ದೀ ಅಂತ ಹೇಳಿದೆ. ಅದಕ್ಕೇ ನಿನ್ನ ಭೇಟಿ ಮಾಡಬೇಕು ಅಂತ ಆಶೆ ಪಟ್ಟರು. ಸಾಯಂಕಾಲ ಮನೇಲೆ ಇರು" ಎಂದ ಶಾಮಣ್ಣ

ಎಷ್ಟೆಷ್ಟು ಬೇಗ ಕಚೇರಿ ಕೆಲಸ ಮುಗಿಸೋಣ ಅಂದರೂ ಸಂಜೆ ೫-೨೦ ಆಯಿತು. ಮನೆಗೆ ಬರೋ ಹೊತ್ತಿಗೆ ೬-೧೫ ಆಗಿತ್ತು. ಮನೇಗೆ ಬಂದ ಕೂಡಲೆ ಹೆಂಡತಿಗೆ ಹೇಳಿದೆ. "ಹೀಗೆ ೭ ಗಂಟೆಗೆ ಅಮೇರಿಕಾದ ಆಲ್ಕಾಟರು ನಮ್ಮನೆಗೆ ಬರ್ತಾರೆ. ಏನಾದರೂ ಫಲಾಹಾರ ಸಾಧ್ಯವೇ" ಅಂತ. "ಅತ್ತೆಮ್ಮನವರು ಇವತ್ತು ರಾತ್ರಿ ಫಳಾರಕ್ಕೆ ಗೊಜ್ಜವಲಕ್ಕಿ ಮಾಡಿಕೊಂಡಿದ್ದಾರೆ. ಅವರಿಗೆ ಬಾಯಿ ಹುಣ್ಣು ಬಂದಾಗಿನಿಂದ ಇನ್ನಾರು ಫಳಾರ ಮಾಡಲು ಬಿಡುಲ್ಲ. ಅಂದರೆ ನಿಮ್ಮ ಅಮೆರಿಕಾ ಅತಿಥಿಗೂ ಈ ರುಚಿಯಾಗಬಹುದು" ಅಂತ ಆಕೆ ಅಂದಳು. "ಆಯ್ತುಬಿಡು. ಆದರೆ ಹಜಾರಾನಾದರೂ ಗುಡಿಸಿ ಕೂಡಲಿಕ್ಕೆ ಅನುಕೂಲ ಮಾಡೋಣು" ಅಂದೆ.

ನಮ್ಮನೆ ಹಜಾರದಲ್ಲಿ ಮೂರು ಬೆತ್ತದ ಕುರ್ಚಿ. ಸಂದೂಕದ ಮೇಲೆ ಗೋಣಿಚೀಲವನ್ನು ಮಡಿಸಿ ಹಾಕಿ ಅದರ ಮೇಲೆ ಹಳೆ ಬಿಳಿ ಸೀರೆಯನ್ನು ಹೊದ್ದಿಸಿ ಅದೊಂದು ಪೀಠ ಅನ್ನೋ ಹಾಗೆ ಮಾಡಿದ್ದೆವು. ಒಂದು ಬೆತ್ತದ ಕುರ್ಚಿ ತಳ

ಸ್ವಲ್ಪ ಹಿಸಿದಿತ್ತು. ಏನು ಮಾಡೋಣವೇ ಅಂದೆ. ತೊಟ್ಟಿಲಲ್ಲಿರುವ ದಟ್ಟಿ ತಂದು ಹಾಸ್ತೀನಿ ಅಂದರೆ. ನೀವೇ ಈ ಕುರ್ಚಿಮೇಲೆ ಕೂತುಕೊಳ್ಳಿ ನಿಮ್ಮ ಭಾರ ತಡೆಯುತ್ತೆ. ಅಂತ ಆಕೆ ಅಂದಳು, ಹಾಗೆ ಮಾಡಿದೆವು. ದಟ್ಟದ ವಾಸನೆ ಹೋಗಲಿ ಅಂತ ಪುಷ್ಕಳವಾಗಿ ಡಿ. ಡಿ. ಟಿ. ಸಿಂಪಿಸಿದೆವು.

ಠಾಕೋಠಾಕು ಏಳು ಗಂಟೆಗೆ ಹದಿನಾರಡಿ ಸರ್ಕಾರಿ ಮೋಟಾರು ನಮ್ಮನೆ ಬಾಗಿಲಲ್ಲಿ ಬಂದು ನಿಂತಿತು. ನಾನು ಹೊರಗೆ ಹೋಗೋದರಲ್ಲೇ ಆಲ್ಕಾಟರು ನಮ್ಮ ಮನೆಯೊಳಕ್ಕೇ ಧಾವಿಸಿದರು. ಹಿಂದೆಯೇ ಶಾಮಣ್ಣನೂ ಬಂದ.

"ಹಲೋ! ಮಿ! ಕುಮಾರ್! ನಿಮ್ಮ ಪರಿಚಯ ಮಾಡಿಕೊಳ್ಳಲು ಅವಕಾಶ ಕೊಟ್ಟದ್ದಕ್ಕೆ ತುಂಬಾ ವಂದನೆಗಳು. ಎಷ್ಟು ಅಂದವಾದ ಮನೆ! ಆಹಾ! ಅಂತ ಗೋಡೆ ಕಡೆ ಗೋಣಿತ್ತಿದ. ಕುರ್ಚಿ ಸರಬರಾಜಿನಲ್ಲಿ ನಾವು ಗೋಡೇನ ಮರತೇ ಇದ್ದೆವು. ನಮ್ಮ ತಾಯಿ ಎಳೆ ಸೊಸೆಯಾಗಿ ಬಂದಾಗ ಹಾಕಿದ್ದ ಮಣಿ ಪಟಗಳು, ಉಲ್ಲನ್ ದಾರದ ಪಟಗಳು ಎಲ್ಲವೂ ಸಾಲುಸಾಲಾಗಿ ಮಣಕು ಹಿಡಿದು ಗೋಡೆಗೆ ಆತುಕೊಂಡಿದ್ದುವು. ಒಂದೊಂದನ್ನು ನೋಡಿದಾಗಲೂ, ಆಲ್ಕಾಟರು ಒಂದ್ನ ಭರತನಾಟ್ಯದ ಕುಣಿತ ಕುಣಿಯುತ್ತಿದ್ದರು. ಎಂತಹ ಸಹಜವಾದ ಕಲೆ! ಎಂತೆಂತ ರಂಗು ರಂಗಿನ ವಿನ್ಯಾಸ! ಯಾವ ಕಲಾ ಸಾರ್ವಭೌಮು ಇದನ್ನು ರಚಿಸಿದ್ದು. ಸುಮಾರು ಖರ್ಚಾಗಿರಬೇಕು ಇವೆಲ್ಲಕ್ಕೂ. ಎಷ್ಟು ವರ್ಷಗಳಾದುವೋ ಇವೆಲ್ಲವನ್ನ ಶೇಖರಿಸಲು. ಎಂದೆಲ್ಲಾ ಉದ್ಗಾರ ತೆಗೆದು ಎಲ್ಲದರ ಫೋಟೊಗಳನ್ನೂ ಹಿಡಿದು ಕೊಂಡರು. ನಂತರ ನನ್ನ ಕಡೆಗೆ ತಿರುಗಿ.

"ಎಂತಹ ಪುಣ್ಯವಂತರ್ರೀ ನೀವು" ಎಂದು ಶಹಭಾಸ್ ಕೊಟ್ಟರು.

"ಕೂಡ್ರಿ ಕೂಡ್ರಿ" ಎಂದೆ. "ಅಲ್ಪಾಹಾರ ಸ್ವೀಕರಿಸಬೇಕು" ಎಂದೂ ಹೇಳಿದೆ. ಇದ್ದುದರಲ್ಲಿ ಗಟ್ಟಿಯಾದ ಕುರ್ಚಿಯನ್ನು ತೋರಿಸಿದೆ. ಅವರು ಕೂತುಕೊಂಡರು. ಶಾಮಣ್ಣನನ್ನು ಇನ್ನೊಂದರಲ್ಲಿ ಕೂರಿಸಿದೆ. ನಾನು ದಟ್ಟದ ಕುರ್ಚಿಯಲ್ಲಿ ಕೂತುಕೊಂಡೆ, ಆಕೆ ಮೂರು ತಟ್ಟೇಲಿ ಅಮ್ಮ ಮಾಡಿಕೊಂಡಿದ್ದ ಗೊಜ್ಜವಲಕ್ಕಿ ಯನ್ನು ತಂದು ಕೊಟ್ಟಳು. ಪರಸ್ಪರ ಪರಿಚಯ ಆದಮೇಲೆ ಆಲ್ಕಾಟರು ಗೊಜ್ಜವಲಕ್ಕಿ ಬಾಯಿಗೆ ಹಾಕಿಕೊಂಡರು. ಬಲು ಚೆನ್ನ ಬಲು ಚೆನ್ನ ಬಲು ಪಸಂದ್ ಅಂತ ನಾನಿನ್ನೂ ಮೂರು ಚಮಚ ತಿನ್ನೋದರಲ್ಲೇ ಆತ ತಟ್ಟೆ ಖಾಲಿ ಮಾಡಿದ್ದ. "ಇನ್ನೂ ಸ್ವಲ್ಪ!" ಅಂದೆ, ಆಗಬಹುದು ಅಂತ ತಲೆಯಾಡಿಸಿದರು. ಆಕೆ ತಂದು ಬಡಿಸಿದಳು. ಹೀಗೆ ನಾಲ್ಕು ಸಾರಿ ಅವರಿಗೆ ಬಡಿಸಿದಮೇಲೆ ಖಾಲಿ ತಪ್ಪಲೆ ನನಗೆ ತೋರಿಸಿ ಆಕೆ ಹಿಂತಿರುಗಿದ್ಧಳು. ಇನ್ನೂ ಸ್ವಲ್ಪ ಅಂತ ನಾನಲ್ಲಲಿಲ್ಲ.

ಬೇಲದ ಹಣ್ಣಿ ಪಾನಕ ತಂದು ಕುಡಿಸಿದಳು. "ಬಲು ಚೆನ್ನ ಬಲು ಪಸಂದ್" ಎಂದೇ ಆಲ್ಕಾಟರನ್ನುತ್ತಿದ್ದರು. ಚಪ್ಪರಿಸುತ್ತಿದ್ದರು.

ಆಗ ನಾನೆದ್ದೆ. ಗೀತೆಮೇಲೆ ಒಂದು ಸಣ್ಣ ಭಾಷಣ ಬಿಗಿಯೋಣ ಅಂತ. ನಾನೆದ್ದಮೇಲೆ ಕುರ್ಚಿಮೇಲಿದ್ದ ದಟ್ಟಿದಮೇಲೆ ಆಲ್ಕಾಟರ ಕಣ್ಣು ಬಿತ್ತು ಹಾವನ್ನು ಕಂಡ ಕಪ್ಪೆ ಯಾಂತ್ರಿಕವಾಗಿ ಸ್ತಬ್ಧವಾಗುತ್ತಲ್ಲ; ಹಾಗೆ ಆಲ್ಕಾಟರು ಆ ದಟ್ಟಿವನ್ನು ನೋಡಿ ಮಂಕುಬೂದಿ ಎರಚಿಸಿಕೊಂಡಂತಾದರು. ಸ್ವಲ್ಪ ಹೊತ್ತಾದ ಮೇಲೆ ಯಾಂತ್ರಿಕವಾಗಿ ಎದ್ದು ದಟ್ಟಿದ ಹತ್ತಿರಕ್ಕೆ ಮೆಲ್ಲಗೆ ನಡೆದು ಬಂದರು. ಕಪ್ಪೆ ಹಿಡಿಯಿತ್ತಿದ್ದ ಹಾವಿನ ಹತ್ತಿರಕ್ಕೆ ಕುಪ್ಪಳಿಸಿಕೊಂಡು ಬಂದ ಹಾಗೇನೆ. ನಂತರ ಮೆಲ್ಲಗೆ ಕುರ್ಚಿಯ ಮೇಲಿನ ದಟ್ಟಿದ ಮೇಲೆ ಹಗೂರಾಗಿ ಬೆರಳಾಡಿಸಿದರು. ಬ್ರಹ್ಮಾನಂದವನ್ನು ಪಡೆದ ಯೋಗಿಯಂತೆ ಅರೆಕ್ಷಣ ಆನಂದ ಸಮಾಧಿಯನ್ನೈದಿದರು.

ಈಗ ಆ ದಟ್ಟಿದ ವಿಷಯ ತಿಳಿಸೋದು ಕ್ಷೇಮ. ಮೂರು ತಲೆ ಮಾರಿನಿಂದ ಎಳೆ ಮಕ್ಕಳ ತೊಟ್ಟಿಲಿಗೆ ನಮ್ಮನೆಯಲ್ಲಿ ಅದೇ ಆಧಾರ. ಅಜ್ಜಿ ಹಳೇ ಸೀರೆ, ಅಜ್ಜನ ಮದುವೆ ಪಂಚೆ, ಅಮ್ಮನ ಹಳೇ ಸೀರೆಗಳು ಅಪ್ಪನ ಹಳೇ ಷರಾಯಿಗಳು. ಅಕ್ಕನ ರವಿಕೆ ಚೂರುಗಳು, ಇವುಗಳೆಲ್ಲವೂ ಅದರ ರಚನೆಗೆ ಬೆಂಬಲವಾಗಿದ್ದುವು. ನನ್ನ ಆರನೆ ಮಗುವಿನ ಹೊತ್ತಿಗೆ ನನ್ನಾಕೆ ಅತ್ತೆಯ ಧಾರೆಯ ಸೀರೆಯ ಸೆರಗನ್ನು ದಟ್ಟಿದ ಅಂಚಿಗೆ ಹೊಲಿದಿದ್ದಳು. ದಟ್ಟಿದ ಅಂಚೆಲ್ಲಾ ಸರಿಗೆಯಿಂದ ತುಂಬಿತ್ತು. ದಟ್ಟಿದ ಒಡಲಿಗೆ, ನನ್ನ ಮೊದಲ ಮಗಳ ಹಳೆ ರೇಷ್ಮೆ ಲಂಗದ ಚೌಕಳಿಗಳನ್ನು ಹೊಲಿದಿದ್ದಳು. ಹಾಗೂ ಮೂರನೇ ಮಗನ ಮಖಮಲ್ ಟೋಪಿಯ ಚೌಕಳಿಗಳನ್ನು ಅಲ್ಲಲ್ಲಿ ಹೊಲೆದಿದ್ದಳು. ರಂಗು ರಂಗಿನ ಮೇಲಿತ್ತು ದಿಟ. ನೋಡಿದರೆ ಕಿವಿಗೆ ತಾಕೋ ಹಾಗಿತ್ತು. ಮುಟ್ಟಿದರೇನೋ ಮೆತ್ತಗಿತ್ತು. ನವಿರಾಗಿತ್ತು ಬಿಸಿಯಾಗಿತ್ತು.

ಆನಂದ ಸಮಾಧಿಯಿಂದ ಎದ್ದರು ಆಲ್ಕಾಟರು. ಶಾಮಣ್ಣನ ಕಡೆ ನೋಡಿದರು ಮಿಸ್ಟರ್ ಇಂತಹ ಕಲಾಪೂರ್ಣ ಅಂಗಾಲು ಜಂಖಾನಗಳನ್ನು ನೀವು ನೇಕಾರರಿಂದ ನೇಯಿಸಿ ಹೊಲಿಸಿ ಅಮೆರಿಕಾಕ್ಕೆ ಕಳಿಸಿದರೆ, ಇವಕ್ಕೆ ಗಿರಾಕಿ ಹೇರಳವಾಗಿ ದೊರೆಯುತ್ತೆ. ಏನಿಲ್ಲ ಅಂದರೂ ಇದನ್ನು ಸಾವಿರ ರೂಪಾಯಿಗೆ ಸುಲಭವಾಗಿ ಮಾರಬಹುದು ಆದರೆ. ಇವನ್ನೆಲ್ಲಾ ಕೈಗಳಿಂದಲೇ ನೇಯಿಸಬೇಕು. ಇದೇ ತರಹ ಮಾದರಿ ಇರಬೇಕು. ಹೀಗೇ ಬಣ್ಣ ಹಚ್ಚಿರಬೇಕು" ಎಂದರು.

ನನ್ನ ಕಡೆ ತಿರುಗಿದರು "ಮಿ|| ಕುಮಾರ್ ಇಂತಹ ಕಲಾ ಪೂರ್ಣ ಕೃತಿಗಳನ್ನು ಕೂಡೋ ಕುರ್ಜಿಗೆ ಹಾಕ್ಕೊಂಡಿದ್ದೀರಲ್ಲ! ಎಂತಹ ಪುಣ್ಯವಂತರ್ರೀ" ಎಂದು ಲೊಚಗುಟ್ಟಿರು.

"ಹೇಗೆ ಹೇಳಲಿ ಈತನಿಗೆ, ಕುರ್ಚಿಮೇಲೆ ಹಾಕಿ ನಾನು ಕೂತುಕೊಳ್ಳೋದು ಹಾಗಿರಲಿ! ನನ್ನ ಮಗು ಇದರ ಮೇಲೆ ಮಲಕ್ಕೊಂಡು ಎಲ್ಲಾನು ಮಾಡುತ್ತೆ? ಅಂತ" ಸುಮ್ಮನಿದ್ದೆ.

ಆಲ್ಬಾಟರಂದರು. "ಮಿ|| ಕುಮಾರ್ ನಿಮ್ಮ ಭೇಟಿಯಾದುದು ನನ್ನ ಪುಣ್ಯ ನಿಮ್ಮ ಮನೆ ನೋಡಿದ್ದು ನನ್ನ ಭಾಗ್ಯ. ಕಲಾಭಿರುಚಿ, ಸಹಜಾವಸ್ಥೆಯ ಕಲಾ ಕೃತಿಗಳೆಲ್ಲಾ ನಿಮ್ಮನೆಯಲ್ಲಿ ಹಾಸು ಹೊಕ್ಕಿದೆ. ಇಂತಹ ಮನೆಯಲ್ಲಿ ಆಧ್ಯಾತ್ಮಿಕ ಪ್ರಗತಿ ಇರಲೇಬೇಕು. ಧನ್ಯ ಇದೆಲ್ಲಾ ಕಂಡ ನಾನು" ಎಂದು ಹೊರ ಹೊರಟ. ಶಾಮಣ್ಣ ಅವನ ಬೆನ್ನ ಹಿಂದೆ ಬಿದ್ದ.

ಅಮ್ಮ ಆಗ ಅಡಿಗೆ ಮನೆಯಿಂದ ಹಜಾರಕ್ಕೆ ಬಂದಳು. ಮಾಡಿಟ್ಟುಕೊಂಡಿದ್ದ ಗೊಜ್ಜವಲಕ್ಕೀನೆಲ್ಲಾ ಮುಕ್ಕೇಬಿಟ್ಟನಲ್ಲೋ. ಅರಳು ಮೊಸರೇಗತಿಯಲ್ಲೋ! ಅಲ್ಲದೆ ನನ್ನ ಪಟಗಳನ್ನು ನೋಡಿ ಏನೇನೋ ಇಂಗ್ಲೀಷಿನಲ್ಲಿ ಗೊಣಗ್ತಾ ಇದ್ದನಲ್ಲೋ! ಮಗುವಿನ ತೊಟ್ಟಿಲ ದಟ್ಟಿ ನೋಡಿ ಏನೋನೋ ಹಾರಾಡ್ತಾ ಇದ್ದನಲ್ಲೋ! ಕುಡಿದು ಬಂದಿದ್ದನೇನೋ? ಅಂತ ಸಹಜವಾಗಿಯೇ ಕೇಳಿದಳು.

ಅವನು ಇಂಗ್ಲೀಷಿನಲ್ಲಿ ಅಂದಿದ್ದು ಆಡಿದ್ದು ಎಲ್ಲವನ್ನೂ ಅಮ್ಮನಿಗೆ ಕನ್ನಡದಲ್ಲಿ ವಿವರಿಸಿ ಹೇಳಿದೆ. ಅದನ್ನೇ ಈ ಲೇಖನದಲ್ಲಿ ಬರೆದಿರೋದು.

ಮಾರನೆದಿನ ಶಾಮಣ್ಣ ತಿರುಗಿ ಟೆಲಿಫೋನ್ ಮಾಡಿದ.

"ಕುಮಾರ್! ನಿನ್ನ ಅದೃಷ್ಟ ಖುಲಾಯಿಸಿದೆ. ಆಲ್ಬಾಟನಿಗೆ ನಿನ್ನ ದಟ್ಟಿದ ಮೇಲೆ ಮೋಹ ಹುಟ್ಟಿದೆ. ನಿನ್ನನ್ನು ಎದುರಿಗೆ ಮಾರುತ್ತೀರಾ ಎಂದು ಕೇಳಲು ಅವರು ನಾಚಿಕೊಂಡರಂತೆ. ಅದಕ್ಕೇ ಹಿಂತಿರುಗುವಾಗ ನನ್ನ ಕೇಳಿದರು. ಆ ದಟ್ಟಿ ಮಾರೋದಾದರೆ ಸಾವಿರ ರೂಪಾಯಿ ಕೊಡ್ತೀನಿ ಅಂತ ಏನು ಹೇಳ್ತಿ" ಅಂದ.

"ಅಮ್ಮನ್ನ ಕೇಳಬೇಕಪ್ಪಾ. ಮಕ್ಕಳಿಗೆ ಆಗಿ ಬಂದಿದೆ ಅಂತ ಅಮ್ಮ ಮಾರುಕ್ಕೆ ಒಪ್ಪದೇ ಇದ್ದರೆ ಏನು ಮಾಡೋದು" ಅಂದೆ.

"ಇದಕ್ಕೆಲ್ಲಾ ಅಮ್ಮನ್ನು ಕೇಳಿದರೆ ಕೆಟ್ಟು ಹೋಗ್ತಿ. ನಿನ್ನ ಹೆಂಡತೀನ ಕೇಳು. ಸುಲಭವಾಗಿ ಒಪ್ಪಿಕೋತಾಳೆ. ಸಾವಿರ ರೂಪಾಯಿ ಅನ್ನು. ಅವಳೇ ಕಟ್ಟಿಕೊಡ್ತಾಳೆ. ಅಮ್ಮನಿಗೆ ತಿಳಿದ ಮೇಲೆ ಅತ್ತೆ ಸೊಸೆ ಜಗಳ ಅಂತ ಅನ್ನಿಸಿ ಕೊಳ್ಳುತ್ತೆ "ಅಷ್ಟೇ!" ಅಂತ ಶಾಮಣ್ಣ ಸಲಹೆ ನೀಡಿದ. ಕೊಸರಿಗೆ ಅಂತ ಎರಡು ಮಣಿಪಟಗಳನ್ನು ಬಹುಮಾನವಾಗಿ ಕಳಿಸಿಕೊಟ್ಟೆ.

ಒಂದ ಸಾವಿರ ರೂಪಾಯಿನ ಜತೆಗೆ ನನ್ನ ಸಂಬಳದಿಂದ ಎಂಟು ರೂಪಾಯಿ ಹಾಕಿ, ಒಂದು ಜೋಮಾಲೆ ಸರ ಕೊಂಡುಕೊಂಡು ಬಂದೆ ಅಂತ ಅನ್ನಿ.

—ಕುಮಾರ್